# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:19-11-2024ರಂದು ಮಂಗಳವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 8. | ಡಾ. ಸಣ್ಣಹನುಮಪ್ಪ ಜಿ., ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಅನಂತ ಎಸ್., ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 11. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 12. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 13. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 14. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 15. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 5. | ಡಾ. ಅರುಣಾ ಎ., ಪ್ರಾಂಶುಪಾಲರು | ಸದಸ್ಯರು |

**ಪ್ರಸ್ತಾವನೆ:**

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಕುಲಪತಿಯವರನ್ನು ಹಾಗೂ ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ಇಂದಿನ ಸಭೆಯಲ್ಲಿ ಬಹಳಷ್ಟು ಅಜೆಂಡಾಗಳು ಇರುವುದರಿಂದ ಆರೋಗ್ಯಕರ ಚರ್ಚೆ ನಡೆಸಿ ಉತ್ತಮವಾದ ನಿರ್ಣಯಗಳನ್ನು ತೆಗೆದುಕೊಳ್ಳುವುದರ ಮೂಲಕ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಎಲ್ಲರೂ ಸಹಕರಿಸುವಂತೆ ಕರೆ ನೀಡಿದರು. ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ ನಿಯಮಾನುಸಾರ 45 ದಿನಗಳ ಅಂತರದಲ್ಲಿ ಸಿಂಡಿಕೇಟ್ ಸಾಮಾನ್ಯ ಸಭೆ ನಡೆಸಬೇಕು. ಆದರೆ, ಈ ಬಾರಿ ಬಹಳ ವಿಳಂಬವಾಗಿದೆ ಎಂದರು. ಕುಲಸಚಿವರು ಮಾಹಿತಿ ನೀಡಿ ಈ ನಡುವೆ ಒಂದು ವಿಶೇಷ ಸಿಂಡಿಕೇಟ್ ಸಭೆಯನ್ನು ನಡೆಸಲಾಗಿದೆ. ಅತಿಥಿ ಉಪನ್ಯಾಸಕರ ನೇಮಕಾತಿ, ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಮುಂತಾದ ಕಾರಣಗಳಿಂದ ವಿಳಂಬವಾಗಿದ್ದು, ಮುಂದಿನ ದಿನಗಳಲ್ಲಿ ಸಕಾಲದಲ್ಲಿ ನಡೆಸಲಾಗುವುದು ಎಂದರು. ನಂತರ ಕಾರ್ಯಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

## ಪ್ರಾಧಿಕಾರ ವಿಭಾಗ

**2024–ಸಿಂ–5.01:** ದಿನಾಂಕ:19–07–2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:19–07–2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ವಿಷಯ ಸಂಖ್ಯೆ: 2024–ಸಿಂ–3.11(ಬಿ): ಯಲ್ಲಿ ಮಾನ್ಯ ಕುಲಾಧಿಪತಿಗಳಿಗೆ ಗೌರವ ಡಾಕ್ಟರೇಟ್‌ಗಾಗಿ ಗಣ್ಯರ ಅರ್ಜಿಗಳನ್ನು ನಿಯಮದ ಪ್ರಕಾರ ಸಿದ್ಧಪಡಿಸಿ ಸಲ್ಲಿಸಲು ಪ್ರೊ. ಎಸ್.ವಿ. ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಯಿತು ಎಂದು ನಮೂದಾಗಿರುವುದನ್ನು "ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲಾಯಿತು" ಎಂದು ತಿದ್ದುಪಡಿ ಮಾಡಿ ಉಳಿದವರನ್ನು ಸಮಿತಿಯ ಸದಸ್ಯರನ್ನಾಗಿ ಹಾಗೂ ಕುಲಸಚಿವ(ಆಡಳಿತ) ಇವರನ್ನು ಸಂಚಾಲಕರನ್ನಾಗಿ ಅಧಿಸೂಚನೆ ಹೊರಡಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ದಿನಾಂಕ:19–07–2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ವಿಷಯ ಸಂಖ್ಯೆ: **2024–ಸಿಂ–3.16:** Learning Management System (LMS) Installation ಕುರಿತು ಮಾತನಾಡಿದ ಸದಸ್ಯರಾದ ಶ್ರೀ ಕೆ.ಪಿ.ಶ್ರೀಪಾಲ್‌ರವರು, ಈ ಹಿಂದೆ ರೂ.25.00 ಲಕ್ಷ (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ) ಗಳನ್ನು LMS ತಂತ್ರಾಂಶ ಅಳವಡಿಸುವ ಸಲುವಾಗಿ ಟೆಂಡರ್ ಅನುಮೋದನೆಯಾಗಿರುವ ಸಂಸ್ಥೆಗೆ ಪಾವತಿಸಲು ಹಾಗೂ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಶೇ.70ರಷ್ಟು ಹಣವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು ಹಾಗೂ ಶೇ.30ರಷ್ಟನ್ನು ಸೇವಾ ಸಂಸ್ಥೆ ಪಡೆಯಬೇಕು ಎಂದು ನಿರ್ಣಯವಾಗಿತ್ತು. ನಂತರದಲ್ಲಿ LMS Installation ಗಾಗಿ ರೂ.96.00 ಲಕ್ಷ (ರೂಪಾಯಿ ತೊಂಭತ್ತಾರು ಲಕ್ಷ ಮಾತ್ರ) ಗಳನ್ನು ಪಾವತಿಸುವಂತೆ ಒಪ್ಪಂದ ಮಾಡಿಕೊಂಡಿದ್ದು, ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟವಾಗುತ್ತದೆ ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಕೋರ್ಸ್‌ಗಳಿಗಾಗಿ ಯು.ಜಿ.ಸಿ.ಯ ನಿರ್ದೇಶನದ ಮೇರೆಗೆ Learning Management System (LMS) ಅಳವಡಿಕೆಯ ಸಲುವಾಗಿ ಇ–ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ಇದರಲ್ಲಿ ಅರ್ಹಗೊಂಡ Pheme Software pvt Ltd. Bangalore ಸಂಸ್ಥೆಯೊಂದಿಗೆ ಒಡಂಬಡಿಕೆ (MOA) ಮಾಡಿಕೊಳ್ಳಲು ದಿನಾಂಕ: 16–06–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ನಂತರ ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಬಿಡ್‌ನ ಒಟ್ಟು ಮೊತ್ತ ರೂ.1,35,00,000/– (ರೂಪಾಯಿ ಒಂದು ಕೋಟಿ ಮೂವತ್ತೈದು ಲಕ್ಷ ಮಾತ್ರ) ಗಳನ್ನು ಸದರಿ ಸಂಸ್ಥೆಗೆ ಜಿ.ಎಸ್.ಟಿ. ಯೊಂದಿಗೆ ಎರಡು ಕಂತುಗಳಲ್ಲಿ ಪಾವತಿಸಲು ಹಾಗೂ ಮೊದಲ ಕಂತಿನ ಮೊಬಲಗನ್ನು ಪಾವತಿಸಲು ವಿಶ್ವವಿದ್ಯಾಲಯ ಹೊರಡಿಸಿರುವ ಆದೇಶವನ್ನು ಅನುಮೋದಿಸಿ ಸ್ಥಿರೀಕರಿಸಿರುತ್ತದೆ.

ನಂತರದಲ್ಲಿ, ದಿನಾಂಕ:22–09–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿ, LMS Software Installation ಗೆ ರೂ.25,00,000/– (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ) ಗಳನ್ನು ಎಲ್–1 ಬಿಡ್‌ದಾರರಾಗಿ ಆಯ್ಕೆಯಾಗಿರುವ Pheme Software Pvt. Ltd., Bangalore ಸಂಸ್ಥೆಗೆ ಪಾವತಿಸಲು ಮತ್ತು ಉಳಿದ ವೆಚ್ಚಗಳನ್ನು ಹಂತ ಹಂತವಾಗಿ ಅಗತ್ಯಕ್ಕೆ ಅನುಗುಣವಾಗಿ ಪಾವತಿಸಬಹುದು ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಶೇ.70ರಷ್ಟು ಹಣವನ್ನು ವಿಶ್ವವಿದ್ಯಾಲಯವು ಉಳಿಸಿಕೊಂಡು, ಉಳಿದ ಶೇ.30ರಷ್ಟು ಮೊಬಲಗನ್ನು ಸದರಿ ಸಂಸ್ಥೆಗೆ ಪಾವತಿಸಲು ನಿರ್ಣಯಿಸಿರುತ್ತದೆ. Pheme Software Pvt. Ltd., Bangalore ಸಂಸ್ಥೆಗೆ LMS Software Installationಗಾಗಿ ರೂ.1,35,00,000/– (ರೂಪಾಯಿ ಒಂದು ಕೋಟಿ ಮೂವತ್ತೈದು ಲಕ್ಷ ಮಾತ್ರ) ಗಳನ್ನು ಪಾವತಿಸುವಂತೆ ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023–ಸಿಂ–5.12ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಹಿಂಪಡೆದು, ಈ ಹಿಂದೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸಿ, ಹೊಸ ಒಪ್ಪಂದ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತ್ತು. ಈ ನಿರ್ಣಯದ ಪ್ರಕಾರ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ

ಪರಿಷ್ಕೃತ ಒಪ್ಪಂದ ಮಾಡಿಕೊಳ್ಳುವಂತೆ Pheme Software Pvt. Ltd., Bangalore ಸಂಸ್ಥೆಗೆ ಲಿಖಿತರೂಪದಲ್ಲಿ ತಿಳಿಸಿದ್ದಾಗ್ಯೂ ಅವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

ನಂತರದಲ್ಲಿ ದಿನಾಂಕ:20-02-2024ರಂದು ಅವರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು, ರೂ.25.00 ಲಕ್ಷ (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ) ಗಳಿಗೆ ಸೇವೆ ಒದಗಿಸಲು ಸಾಧ್ಯವಿಲ್ಲ. ಆದುದರಿಂದ, ಟೆಂಡರ್ ಹಾಗೂ ಈ ಹಿಂದಿನ ಒಪ್ಪಂದದ ಪ್ರಕಾರ ರೂ.1,35,00,000/- (ರೂಪಾಯಿ ಒಂದು ಕೋಟಿ ಮೂವತ್ತೈದು ಲಕ್ಷ ಮಾತ್ರ) ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದರು. ಈಗಾಗಲೇ ಈ ಸಂಸ್ಥೆಯ ತಂತ್ರಾಂಶದ ಮೂಲಕ ಮೂಲಕ 1311 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ತುರ್ತಾಗಿ ಶೈಕ್ಷಣಿಕ ಚಟುವಟಿಕೆಗಳನ್ನು LMS ಮೂಲಕ ಆರಂಭಿಸಬೇಕಾಗಿರುವ ಹಿನ್ನೆಲೆಯಲ್ಲಿ ದಿನಾಂಕ:28-02-2024ರಂದು ನಡೆದ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಲಾಗಿತ್ತು. ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ನಂತರ, ಇದರ ಕುರಿತಾಗಿ ಈ ಹಿಂದಿನ ಕೆಲವು ಸಿಂಡಿಕೇಟ್ ಸಭೆಗಳಲ್ಲಿ ನಿರ್ಣಯವಾಗಿದ್ದರೂ ಕೂಡ LMSನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ. ಆದುದರಿಂದ ದರ ಸಂಧಾನ ಸೇರಿದಂತೆ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿ ನೀಡಲು ಒಬ್ಬರು ಸಿಂಡಿಕೇಟ್ ಸದಸ್ಯರು, ಕಾನೂನು ಸಲಹೆಗಾರರು, ತಾಂತ್ರಿಕ ಸಲಹೆಗಾರರು, ಕುಲಸಚಿವರು (ಮೌಲ್ಯಮಾಪನ) ಸೇರಿದಂತೆ ಒಂದು ಸಮಿತಿಯನ್ನು ರಚಿಸುವಂತೆ ನಿರ್ಣಯಿಸಲಾಯಿತು.

ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ರಚಿಸಲಾಗಿದ್ದ ಸಮಿತಿಯು, ಎಲ್-1 ಆಗಿದ್ದ ಸಂಸ್ಥೆಯೊಂದಿಗೆ ದರ ಸಂಧಾನ ಸಭೆ ನಡೆಸಿದ್ದು, ಸಂಸ್ಥೆಯವರು ವಿಶ್ವವಿದ್ಯಾಲಯ ನಿಗದಿಪಡಿಸಿದ್ದ ರೂ.25.00ಲಕ್ಷ (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ) ಗಳಿಗೆ ಸೇವೆ ನೀಡಲು ಸಾಧ್ಯವಿಲ್ಲ, ಟೆಂಡರ್ ಪ್ರಕಾರ ಪಾವತಿಸಿದಲ್ಲಿ ಸೇವೆ ಒದಗಿಸುವುದಾಗಿ ತಿಳಿಸಿದ್ದರು. ನಂತರ, ಸದರಿ ಸಂಸ್ಥೆಯೊಂದಿಗೆ ಸುದೀರ್ಘ ಚರ್ಚೆ ನಡೆಸಿದ ನಂತರ ಅಂತಿಮವಾಗಿ ರೂ.96.00 ಲಕ್ಷ (ರೂಪಾಯಿ ತೊಂಭತ್ತಾರು ಲಕ್ಷ ಮಾತ್ರ) ಗಳಿಗೆ ಅಂತಿಮಗೊಳಿಸಿದ್ದು, ಅದರ ಪ್ರಕಾರ ಆದೇಶ ನೀಡಲಾಗಿದೆ ಮತ್ತು ಸಿಂಡಿಕೇಟ್ ಅನುಮೋದನೆ ಕೂಡ ಪಡೆಯಲಾಗಿದೆ ಎಂದರು.

ಶ್ರೀ ಶಶಿಧರ ಬಿ.ಎನ್. ರವರು ಮಾತನಾಡಿ, ಇದರಲ್ಲಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವಿರುವುದರಿಂದ, ಟೆಂಡರ್ ಪಡೆದಿರುವ Pheme Software Pvt. Ltd., Bangalore ಸಂಸ್ಥೆಯವರು ಸಾಫ್ಟವೇರ್ ಅನುಷ್ಠಾನ ಸೇರಿದಂತೆ ಈವರೆಗೂ ಏನೇನು ಕೆಲಸ ಮಾಡಬೇಕಾಗಿತ್ತು. ಇದುವರೆಗೆ ನಿರ್ವಹಿಸಿರುವ ಕೆಲಸಕಾರ್ಯಗಳು, ಅವರು LMS ಮೂಲಕ ಈವರೆಗೆ ಪ್ರವೇಶ ನೀಡಿರುವುದು, ಅಧ್ಯಯನ ಸಾಮಗ್ರಿಗಳ ಸರಬರಾಜು, ಸಂಪರ್ಕ ತರಗತಿಗಳನ್ನು ನಡೆಸಿರುವುದು ಸೇರಿದಂತೆ ಈಗಾಗಲೇ ಪಾವತಿಸಿರುವ ಹಣಕ್ಕೆ ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಸಮಗ್ರವಾಗಿ ಪರಿಶೀಲಿಸಬೇಕಾಗುತ್ತದೆ. ಇದಕ್ಕಾಗಿ ಒಂದು ವಿಶೇಷ ಸಮಿತಿ ರಚಿಸುವುದು ಒಳಿತು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ ಇದರ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ವರದಿ ನೀಡಲು ಸಮಿತಿಯನ್ನು ರಚಿಸಲಾಗುವುದು ಎಂದರು.

**ವಿಷಯ ಸಂಖ್ಯೆ: 2024-ಸಿಂ-3.16:** ರಲ್ಲಿ LMS Instalattion ಕುರಿತು ಪ್ರಥಮ ಹಂತದ ಬಿಡ್ ಮೊತ್ತ ರೂ. 67,96,500/- ಪಾವತಿಸಲು ಎಂದು ತಪ್ಪಾಗಿ ನಮೂದಿಸಲಾಗಿದ್ದು, ರೂ.67,96,800/- ಎಂದು ತಿದ್ದುಪಡಿ ಮಾಡಲು ಸಭೆಯ ಗಮನಕ್ಕೆ ತರಲಾಯಿತು.

**ವಿಷಯ ಸಂಖ್ಯೆ: 2024-ಸಿಂ-3.38(2ಸಿ):**ಶ್ರೀ ಚಂದ್ರಕಾಂತ ಎಂ. ಸಹಾಯಕ ಕುಲಸಚಿವರು, ಐ.ಕ್ಯೂ.ಎ.ಸಿ., ವಿಭಾಗ ಇವರ ನೇಮಕಾತಿ ಮತ್ತು ಸಹಾಯಕ ಕುಲಸಚಿವ ಹುದ್ದೆಗೆ ನೀಡಲಾಗಿರುವ ಬಡ್ತಿ ಕುರಿತಾದ ವಿಷಯಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಸಾಕಮ್ಮರವರು ಮಾತನಾಡಿ, ಶ್ರೀ ಚಂದ್ರಕಾಂತ, ಎಂ., ರವರ ಪ್ರಕರಣದ ಬಗ್ಗೆ ನಿಯಮಗಳು ಹಾಗೂ ಸುಪ್ರೀಂ ಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯಗಳ ತೀರ್ಮಗಳನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಸಂಬಂಧ ಕಾನೂನು ಅಭಿಪ್ರಾಯ ಪಡೆಯಲು ಮಾಹಿತಿಯೊಂದಿಗೆ ಪತ್ರಿಸಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ. ಅದೇ ರೀತಿ ಕೈಗೊಂಡ ಕ್ರಮದ ಬಗ್ಗೆ ಹೆಚ್.ಆರ್.ಎಂ., ವಿಭಾಗದವರು ವಿವರ ನೀಡಿದ್ದಾರೆ. ಆದರೆ, ಇತ್ತೀಚೆಗೆ ಶ್ರೀ ಚಂದ್ರಕಾಂತ್ ಎಂ. ರವರಿಗೆ 2006 ರಿಂದ ಪೂರ್ವಾನ್ವಯವಾಗುವಂತೆ ಸಹಾಯಕ ಕುಲಸಚಿವ ಹುದ್ದೆಗೆ ಮುಂಬಡ್ತಿ ನೀಡಿ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಿ ಆದೇಶ ನೀಡಲಾಗಿದೆ. ವಿಶ್ವವಿದ್ಯಾಲಯ ಪ್ರಕಟಿಸಿರುವ ವಿವಿಧ ಜೇಷ್ಠತಾ ಪಟ್ಟಿಗಳು ಸೇರಿದಂತೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಬಿ.ಕೆ. ಪವಿತ್ರ ಪ್ರಕರಣದಲ್ಲಿ 2017ರಿಂದ ಅನ್ವಯವಾಗುವಂತೆ 2020ರಲ್ಲಿ ಪ್ರಕಟಿಸಿರುವ ಅಧ್ಯಾಪಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಕೂಡ ಶ್ರೀ ಚಂದ್ರಕಾಂತ್ ಎಂ. ರವರು 2012ನೇ ಇಸವಿಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಅರ್ಹರು ಎಂದು ತಿಳಿಸಲಾಗಿದೆ. ಆದಾಗ್ಯೂ, ನಿಯಮಬಾಹಿರವಾಗಿ 2006 ರಿಂದಲೇ ಪೂರ್ವಾನ್ವಯವಾಗುವಂತೆ ಬಡ್ತಿಗೆ ಪರಿಗಣಿಸಿ ಆದೇಶ ನೀಡಲಾಗಿದ್ದು, ಅದನ್ನು ಹಿಂಪಡೆಯಬೇಕೆಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, 2006 ರಿಂದ ಅನ್ವಯವಾಗುವಂತೆ ಶ್ರೀ ಚಂದ್ರಕಾಂತ್ ಎಂ. ಅವರೊಬ್ಬರನ್ನು ಮಾತ್ರ ಏಕೆ ಪರಿಗಣಿಸಿ ಆದೇಶ ನೀಡಲಾಗಿದೆ. ಉಳಿದವರಿಗೆ ಏಕೆ ಆಗಿಲ್ಲ. ಅವರಿಗೆ ನೀಡಿರುವುದು ಸರಿ ಇದ್ದರೆ ಎಲ್ಲರನ್ನೂ ಪರಿಗಣಿಸಿ ಪರಿಷ್ಕೃತ ಆದೇಶ ನೀಡಿ. ಇಲ್ಲವಾದರೆ ಇವರಿಗೆ ನೀಡಿರುವ ಆದೇಶ ಹಿಂಪಡೆದು ಜೇಷ್ಠತಾ ಪಟ್ಟಿಯ ಪ್ರಕಾರ ಪರಿಗಣಿಸಿ ಈಗ ನೀಡಿರುವ ಆದೇಶವನ್ನು ಪರಿಷ್ಕರಿಸಿ ಎಂದರು.

ಕುಲಸಚಿವರು ಮಾತನಾಡಿ, 2017ರಿಂದ ಅನ್ವಯವಾಗುವಂತೆ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿ ಪ್ರಕಟಿಸಿದ್ದು, ನಂತರ ಪರಿಷ್ಕರಿಸಿಲ್ಲ. 2013ರಲ್ಲಿ ಸಮಿತಿ ಮಾಡಿದ್ದರು. ಶ್ರೀ ಚಂದ್ರಕಾಂತ್ ಎಂ. ರವರ ಪ್ರಕರಣದಲ್ಲಿ 2006ರಿಂದ ಅನ್ವಯವಾಗುವಂತೆ ಸಹಾಯಕ ಕುಲಸಚಿವ ಹುದ್ದೆಗೆ ಪರಿಗಣಿಸಿ ಆದೇಶ ಹೊರಡಿಸಲಾಗಿದೆ. ಆದರೆ, ಅದು ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಈ ಕುರಿತು ಕೆಲವು ನೌಕರರಿಂದ ಆಕ್ಷೇಪಣೆಗಳು ಬಂದಿವೆ. ಅವುಗಳನ್ನು ಪರಿಶೀಲಿಸಲಾಗುವುದು. ಮುಂದಿನ ಆದೇಶ ಆಗುವವರೆಗೂ ಶ್ರೀ ಚಂದ್ರಕಾಂತ ಎಂ. ರವರ ಬಡ್ತಿಗೆ ಸಂಬಂಧಪಟ್ಟ ಎಲ್ಲಾ ಸೌಲಭ್ಯಗಳನ್ನು ತಡೆಹಿಡಿಯಲಾಗುವುದು ಎಂದರು.

ಪ್ರೊ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ ಇವರ ಪತ್ರದ ಅನುಸಾರ **ವಿಷಯ ಸಂಖ್ಯೆ: 2024-ಸಿಂ-3.40(2ಎ):** ರಲ್ಲಿ ತಪ್ಪಾಗಿ ನಮೂದಾಗಿದ್ದ "ಪ್ಯಾಂಕ್ರಿಯಾನ್" ಶಬ್ದವನ್ನು "ಪ್ಯಾಂಕ್ರಿಯಾಟಿಟಿಸ್" ಎಂದು ತಿದ್ದುಪಡಿ ಮಾಡಲು ಸಭೆಯು ಅನುಮತಿಸಿತು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದೂರಶಿಕ್ಷಣ ನಿರ್ದೇಶನಾಲಯದ LMS ಸಾಫ್ಟ್‌ವೇರ್ ಅನುಷ್ಠಾನ ಸೇರಿದಂತೆ ಈವರೆಗೆ ಏನೇನು ಕೆಲಸ ಮಾಡಬೇಕಾಗಿತ್ತು. ಅವರು ಈವರೆಗೆ ಪ್ರವೇಶ ನೀಡಿರುವುದು, ಅಧ್ಯಯನ ಸಾಮಗ್ರಿಗಳ ಸರಬರಾಜು, ಸಂಪರ್ಕ ತರಗತಿಗಳನ್ನು ನಡೆಸಿರುವುದು ಸೇರಿದಂತೆ ಈಗಾಗಲೇ ಪಾವತಿಸಿರುವ ಹಣಕ್ಕೆ ಎಷ್ಟು ಕೆಲಸ ಮಾಡಿದ್ದಾರೆ, ಮುಂದೆ ಆಗಬೇಕಾಗಿರುವ ಕಾರ್ಯಗಳೇನು? ಎಂಬುದನ್ನು ಸಮಗ್ರವಾಗಿ ಪರಿಶೀಲಿಸುವ ಸಲುವಾಗಿ ಒಂದು ವಿಶೇಷ Monitoring Committee ರಚಿಸಲು ಸರ್ವಾನುಮತದಿಂದ ನಿರ್ಣಯಿಸಿತು.

**ಮುಂದುವರೆದು,** ಶ್ರೀ ಚಂದ್ರಕಾಂತ್ ಎಂ. ರವರ ಪ್ರಕರಣಕ್ಕೆ ಸಂಬಂಧಿಸಿದಂತೆ, ಇನ್ನೊಮ್ಮೆ ಸಮಗ್ರವಾಗಿ ಪರಿಶೀಲಿಸಿ ಮುಂದಿನ ಆದೇಶ ಆಗುವವರೆಗೂ ಬಡ್ತಿಗೆ ಸಂಬಂಧಪಟ್ಟ ಎಲ್ಲಾ ಸೌಲಭ್ಯಗಳನ್ನು ತಡೆಹಿಡಿಯಲು ನಿರ್ಣಯಿಸಲಾಯಿತು.

ಮೇಲಿನ ಎರಡು ವಿಷಯಗಳನ್ನು ಹೊರತುಪಡಿಸಿ, ಉಳಿದಂತೆ ದಿನಾಂಕ:19-07-2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಇತರ ವಿಷಯಗಳನ್ನೊಳಗೊಂಡ ನಡಾವಳಿಗಳನ್ನು ಸಭೆಯು ದೃಢೀಕರಿಸಿತು.

**2024-ಸಿಂ-5.02:** ದಿನಾಂಕ:09-09-2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:09-09-2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ದೃಢೀಕರಣಕ್ಕಾಗಿ ಕುಲಸಚಿವರು ಸಭೆಗೆ ಮಂಡಿಸಿದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ದಿನಾಂಕ:09-09-2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ವಿಷಯ ಸಂಖ್ಯೆ:2024-ಸಿಂ-4.03: ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು ಹಾಗೂ ವಿಷಯ ಸಂಖ್ಯೆ: 2024-ಸಿಂ-4.05: ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು ವಿಷಯಗಳ ನಿರ್ಣಯದಲ್ಲಿ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡಿರುವ ಪರಿಣಿತರ ಬಯೋಡೇಟಾಗಳನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಲಾಗಿರುತ್ತದೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಆದರೆ, ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಸ್ನಾತಕೋತ್ತರ ಅಧ್ಯಯನ ವಿಭಾಗದಿಂದ ವಿಶ್ವವಿದ್ಯಾಲಯಕ್ಕೆ ಕಳುಹಿಸುವ ಪಟ್ಟಿಯಲ್ಲಿನ ಪರಿಣಿತರ ಬಗ್ಗೆ ಪೂರ್ವಾಪರಗಳನ್ನು ಪರಿಶೀಲಿಸಿ, ಅವರು ಸೂಕ್ತವೆಂದು ಕಂಡು ಬಂದಲ್ಲಿ ಮಾತ್ರ ಶಿಫಾರಸ್ಸು ಮಾಡಲಾಗುತ್ತದೆ. ಆದುದರಿಂದ, ಪಟ್ಟಿಯನ್ನು ಮಾತ್ರ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗುತ್ತದೆ. ಸದರಿ ಪರಿಣಿತರ ಪಟ್ಟಿಯಿಂದ ಮಾನ್ಯ ಕುಲಪತಿಯವರು ನಾಮನಿರ್ದೇಶನ ಮಾಡುತ್ತಾರೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡುವ ತಜ್ಞ ಅಧ್ಯಾಪಕರ ಬಯೋಡೇಟಾಗಳನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸುವ ಅಗತ್ಯವಿಲ್ಲ ಎಂದರು.

ಚರ್ಚೆಯ ನಂತರ "ಅಧ್ಯಯನ ಮಂಡಳಿ ಪುನರ್‌ರಚನೆ ಕುರಿತು ವಿಷಯಗಳ ನಿರ್ಣಯದಲ್ಲಿ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡಿರುವ ಪರಿಣಿತರ ಬಯೋಡೇಟಾಗಳನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಲಾಗಿರುತ್ತದೆ" ಎಂಬ ನಿರ್ಣಯವನ್ನು ಹಿಂಪಡೆಯಲು ಸಭೆಯು ನಿರ್ಣಯಿಸಿತು ಹಾಗೂ ಸ್ನಾತಕೋತ್ತರ ವನ್ಯಜೀವಿ ಮತ್ತು ನಿರ್ವಹಣೆ ಅಧ್ಯಯನ ಮಂಡಳಿ ಹಾಗೂ ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಅಧ್ಯಯನ ಮಂಡಳಿ ಪುನರ್‌ರಚನೆ ಮಾಡಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ: ಸಂಖ್ಯೆ: 2024–ಸಿಂ–4.07(6)**ರ ಬಗ್ಗೆ ಸದಸ್ಯರಾದ ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೈನ್ಸ್ ಪಾರ್ಕ್ ನಿರ್ಮಿಸಲು 7 ಎಕರೆ ಜಾಗ ನೀಡಿರುವ ಬಗ್ಗೆ ವಿವರ ಕೇಳಿದರು. ಕುಲಸಚಿವರು ಮಾತನಾಡಿ, ಕಳೆದ 2 ವರ್ಷಗಳ ಹಿಂದೆಯೇ ಸಿಂಡಿಕೇಟ್‌ನಲ್ಲಿ ಅನುಮೋದನೆ ಪಡೆದುಕೊಂಡು ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೈನ್ಸ್ ಪಾರ್ಕ್ ನಿರ್ಮಾಣಕ್ಕೆ 7 ಎಕರೆ ಜಾಗವನ್ನು ನೀಡಲು ಅನುಮತಿಸಿ ವಿಶ್ವವಿದ್ಯಾಲಯದಿಂದ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರ ಕೂಡ ಈ ಕುರಿತಾಗಿ ಅಧಿಸೂಚನೆ ಹೊರಡಿಸಿದ್ದು, ಅದರ ಪ್ರಕಾರ 7 ಎಕರೆ ಜಾಗವನ್ನು ಕೂಡ ಹಸ್ತಾಂತರಿಸಲಾಗಿದೆ. ಸದರಿ ಜಾಗದಲ್ಲಿ ಸರ್ಕಾರವು ಸೈನ್ಸ್‌ಪಾರ್ಕ್ ನಿರ್ಮಾಣ ಕಾರ್ಯವನ್ನು ಆರಂಭಿಸಿದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಸಹ್ಯಾದ್ರಿ ಕಾಲೇಜಿನ 7 ಎಕರೆ ಜಾಗವನ್ನು ಸೈನ್ಸ್ ಪಾರ್ಕ್ ನಿರ್ಮಾಣಕ್ಕಾಗಿ ನೀಡಿದ್ದು, ಇದನ್ನು ಸಹ್ಯಾದ್ರಿ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಈ ಹಿಂದಿನಿಂದಲೂ ವಿರೋಧಿಸುತ್ತಲೇ ಬಂದಿದ್ದಾರೆ. ಈ ಕುರಿತಾಗಿ ಇತ್ತೀಚೆಗೆ ಶಿವಮೊಗ್ಗದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದು, ಇದರಲ್ಲಿ ನಾನು, ಮಾಜಿ ಶಾಸಕರಾದ ಶ್ರೀ ಆಯನೂರು ಮಂಜುನಾಥ ಸೇರಿದಂತೆ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು, ಸಹ್ಯಾದ್ರಿ ಕಾಲೇಜುಗಳ ಪ್ರಾಂಶುಪಾಲರುಗಳು ಭಾಗವಹಿಸಿದ್ದೆವು. ಸದರಿ ಸಭೆಯಲ್ಲಿ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಮುಂದಿನ ದಿನಗಳಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳು ಮತ್ತು ಅದಕ್ಕೆ ಅಗತ್ಯವಿರುವ ಭೂಮಿಯ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಮನವರಿಕೆ ಮಾಡಿದ್ದು, ಜಾಗ ನೀಡುವ ವಿಷಯವನ್ನು ಮರು ಪರಿಶೀಲಿಸುವಂತೆ ಹಾಗೂ ಸಧ್ಯಕ್ಕೆ ಯಾವುದೇ ಕಾಮಗಾರಿಗಳನ್ನು ಮುಂದುವರಿಸದೇ ಪೆಂಡಿಂಗ್ ಇಡುವಂತೆ ಮನವಿ ಮಾಡಲಾಗಿದೆ. ಇದಕ್ಕೆ ಒಪ್ಪಿರುವ ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಇನ್ನೊಮ್ಮೆ ಸ್ಥಳ ಪರಿಶೀಲಿಸೋಣ ಎಂದು ತಿಳಿಸಿದ್ದಾರೆ. ಆದುದರಿಂದ, ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೈನ್ಸ್ ಪಾರ್ಕ್ ನಿರ್ಮಾಣಕ್ಕೆ 7 ಎಕರೆ ಜಾಗ ನೀಡಲು ಅನುಮತಿ ನೀಡಿರುವ ದಿನಾಂಕ:28–02–2022ರ ಸಿಂಡಿಕೇಟ್ ನಿರ್ಣಯವನ್ನು ಹಿಂಪಡೆಯುವ ಬಗ್ಗೆ ಮರುಪರಿಶೀಲಿಸಬೇಕೆಂದು ತಿಳಿಸಿದರು. ಬಹಳಷ್ಟು ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೈನ್ಸ್ ಪಾರ್ಕ್ ನಿರ್ಮಾಣಕ್ಕೆ 7 ಎಕರೆ ಜಾಗ ನೀಡಬಾರದೆಂದು ನಿರ್ಣಯಿಸಿದ ಸಭೆಯು, ಈ ಕುರಿತಾಗಿ ಅನುಮತಿ ನೀಡಿರುವ ದಿನಾಂಕ:28–02–2022ರ ಸಿಂಡಿಕೇಟ್ ನಿರ್ಣಯವನ್ನು ಮರುಪರಿಶೀಲಿಸಿ, ಹಿಂಪಡೆದು ಸೈನ್ಸ್ ಪಾರ್ಕ್ ನಿರ್ಮಾಣಕ್ಕೆ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ 7 ಎಕರೆ ಜಾಗ ನೀಡಲು ಸಾಧ್ಯವಿಲ್ಲವಾದ್ದರಿಂದ, ಇದರ ಕುರಿತಾಗಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶವನ್ನು ಕೂಡ ಹಿಂಪಡೆಯುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**ನಿರ್ಣಯ:** ಮೇಲ್ಕಂಡ ತಿದ್ದುಪಡಿ/ಬದಲಾವಣೆಗಳೊಂದಿಗೆ ದಿನಾಂಕ:09-09-2024 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು.

**2024-ಸಿಂ-5.03:** ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿ ಹಾಗೂ ಆಡಳಿತ ವ್ಯವಸ್ಥೆಯ ಸುಧಾರಣೆಯ ಪರಿಷ್ಕೃತ ಕರಡು ಪಾಲಿಸಿಗಳನ್ನು ಅನುಮೋದಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿ ಹಾಗೂ ಆಡಳಿತ ವ್ಯವಸ್ಥೆಯ ಸುಧಾರಣೆಯ ಹಿನ್ನೆಲೆಯಲ್ಲಿ ಅಗತ್ಯವಿದ್ದ ಕೆಲವು ಪಾಲಿಸಿಗಳನ್ನು ಪರಿಷ್ಕರಿಸಿ ಸಿದ್ಧಪಡಿಸಲಾಗಿದೆ. ಸದರಿ ಪಾಲಿಸಿಗಳನ್ನು ದಿನಾಂಕ:30-09-2024ರಂದು ನಡೆದ ಸ್ಥಾಯೀ ಸಮಿತಿ ಸಭೆಯಲ್ಲಿ ಅಂತಿಮಗೊಳಿಸಿದೆ ಮತ್ತು ದಿನಾಂಕ:01-10-2024ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯಲ್ಲೂ ಅನುಮೋದನೆಗೊಂಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಪರಿಷ್ಕೃತ ಕರಡು ಪಾಲಿಸಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

1. Guidelines of Professional Code of Conduct for Employees
2. Green Policy Document
3. Research Ethics Policy
4. Seed Grant Policy
5. Collaboration Policy
6. Information Communication Technology (ICT) Policy
7. Consultancy Policy
8. Intellectual Property – IP Policy
9. Guidelines for Sponsored Research Projects

## ಶೈಕ್ಷಣಿಕ ವಿಭಾಗ

**2024-ಸಿಂ-5.04:** ಕಟೀಲು ಅಶೋಕ್ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ ಈ ಕಾಲೇಜಿನ "ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಕುರಿತು.

**ಚರ್ಚೆ:** ಶಿವಮೊಗ್ಗದ ಕಟೀಲು ಅಶೋಕ್ ಪೈ ಸ್ಮಾರಕ ಕಾಲೇಜಿನ ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಕುರಿತು ಸಿಂಡಿಕೇಟ್ ಅನುಮೋದಿತ ಪರಿಣಿತರ ಸಮಿತಿಯು ದಿನಾಂಕ:17-09-2024ರಂದು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದು, ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಸಭೆಯ ಅನುಮೋದನೆಗಾಗಿ ಕುಲಸಚಿವರು ಮಂಡಿಸಿದರು. ಸದಸ್ಯರಾದ ಶ್ರೀಮತಿ ಸಾಕಮ್ಮರವರು ಮಾತನಾಡಿ, ಕಾಲೇಜಿನಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳಿವೆಯೇ, ಅರ್ಹತೆಯುಳ್ಳ ಮಾರ್ಗದರ್ಶಕರಿದ್ದಾರೆಯೇ? ಎಂದರು. ಪ್ರೊ. ಎಸ್.ವಿ. ಕೃಷ್ಣಮೂರ್ತಿರವರು ಮಾತನಾಡಿ, ತಜ್ಞರ ಸಮಿತಿಯು ಕಾಲೇಜಿಗೆ ಭೇಟಿ ನೀಡಿ, ಯು.ಜಿ.ಸಿ. ನಿಯಮಗಳ ಪ್ರಕಾರ ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳು, ಗ್ರಂಥಾಲಯ, ಪ್ರಯೋಗಾಲಯ ಮುಂತಾದವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಶಿಫಾರಸ್ಸು ಮಾಡಿದೆ. ಮನ:ಶಾಸ್ತ್ರದಲ್ಲಿ ಪಿಹೆಚ್.ಡಿ. ಪಡೆದಿರುವ ಇಬ್ಬರು ಅಧ್ಯಾಪಕರು ಕಾಲೇಜಿನಲ್ಲಿ ಇದ್ದು, ಅವರನ್ನು ಮಾರ್ಗದರ್ಶಕರೆಂದು ಮಾನ್ಯತೆ ನೀಡುವಾಗ ಅಧ್ಯಯನ ಮಂಡಳಿಯು ಸಮಗ್ರವಾಗಿ ಪರಿಶೀಲಿಸುತ್ತದೆ. ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡಿದ ನಂತರವೇ ಮಾರ್ಗದರ್ಶಕರಿಗೆ ಮಾನ್ಯತೆ ನೀಡಬೇಕಾಗುತ್ತದೆ ಎಂದರು. ಡಾ. ಅನಂತರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸಂಯೋಜಿತ ಕಾಲೇಜುಗಳಿಗೆ ಸಂಶೋಧನಾ ಕೇಂದ್ರ ನೀಡುವ ಬಗ್ಗೆ ಚರ್ಚಿಸಿದ್ದೇವೆ. ಪ್ರಸ್ತುತ ಕಾಲೇಜಿನವರು ಯು.ಜಿ.ಸಿ. ನಿಯಮಗಳ ಪ್ರಕಾರ ಅರ್ಜಿ ಸಲ್ಲಿಸಿದ್ದಾರೆ. ತಜ್ಞರ ಸಮಿತಿ ಶಿಫಾರಸ್ಸು ಮಾಡಿದ್ದು, ಕಾಲೇಜು ಅರ್ಹತೆ ಹೊಂದಿದೆ. ಹೆಚ್ಚಿನ ಸಂಶೋಧನಾ ಕೇಂದ್ರಗಳಿದ್ದಲ್ಲಿ, ವಿಶ್ವವಿದ್ಯಾಲಯವು ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎಂಬ ಅಂಶವು ವಿಶ್ವವಿದ್ಯಾಲಯದ ನ್ಯಾಕ್‌ಗೆ ಕೂಡ ಅನುಕೂಲವಾಗುತ್ತದೆ. ಆದುದರಿಂದ ವರದಿಯನ್ನು ಅಂಗೀಕರಿಸಿ ಮುಂದಿನ ಕ್ರಮ ಕೈಗೊಳ್ಳಬಹುದು ಎಂದರು.

ಕುಲಸಚಿವರು

ನಿರ್ಣಯ: ಸುದೀರ್ಘ ಚರ್ಚೆಯ ನಂತರ, ಶಿವಮೊಗ್ಗದ ಕಟೀಲು ಅಶೋಕ್ ಪೈ ಸ್ಮಾರಕ ಕಾಲೇಜಿನ ಸ್ನಾತಕೋತ್ತರ ಮನ:ಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಕುರಿತು ಪರಿಣಿತರ ಸಮಿತಿಯು ದಿನಾಂಕ:17-09-2024ರಂದು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸನ್ನು ಅಂಗೀಕರಿಸಿದ ಸಭೆಯು, ಮನ:ಶಾಸ್ತ್ರ ವಿಷಯದ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡಲು ನಿರ್ಣಯಿಸಿತು.

**2024–ಸಿಂ–5.05:** "Prof. Balabhim Shankarappa Biradar Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದಾನಿಗಳಾದ ಪ್ರೊ.ಬಿ.ಎಸ್.ಬಿರಾದಾರ್‌ರವರ ಸಂಶೋಧನಾ ವಿದ್ಯಾರ್ಥಿಗಳು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಷಯದಲ್ಲಿ (M.L.I.Sc.,) ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Prof. Balabhim Shankarappa Biradar Gold Medal" ಹೆಸರಿನಲ್ಲಿ ವಿಶ್ವವಿದ್ಯಾಲಯದ 34ನೇ ಘಟಿಕೋತ್ಸವದಿಂದ ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

**2024–ಸಿಂ–5.06:** Endowment Lecture from Eminent Scholars – ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತು.

ನಿರ್ಣಯ: ದಾನಿಗಳಾದ Convenors and Research Alumni of Prof. J. Keshavayya, Prof. J. Keshavayya Felicitation Committee, Dept. of Chemistry, Kuvempu University, Shankaraghatta – ಇವರು 2024–25ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಷಯದಲ್ಲಿ Endowment Lecture from Eminent Scholars – ಎಂಬ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು ಮತ್ತು ದಾನಿಗಳನ್ನು ಅಭಿನಂದಿಸಿತು.

## ಅಭಿವೃದ್ಧಿ ವಿಭಾಗ'

**2024–ಸಿಂ–5.07:** ಸಂಶೋಧನಾ ಅಭ್ಯರ್ಥಿಗಳು ಸಂಶೋಧನೆಗಾಗಿ ತೈವಾನ್‌ಗೆ ತೆರಳಲು ಅನುಮತಿ ನೀಡುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಬಿ.ಇ. ಕುಮಾರಸ್ವಾಮಿಯವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸುತ್ತಿರುವ ಕು.ರಾಜೇಶ್ವರಿ ಎಮ್ಮಿ ಮತ್ತು ಕು.ಧೃತಿ ಹೆಚ್. ಆರ್. – ಇವರುಗಳು International Internship Pilot Program (IIPP) which is an internship program in the college of Ming Chi University of Technology, Taiwan (MCUT)ಗೆ ಇಂಟರ್‌ಶಿಪ್‌ಗಾಗಿ ದಿ:01–12–2024 ರಿಂದ ದಿ:28–02–2025 ರವರೆಗೆ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದೆ ಸ್ವಂತ ಜವಾಬ್ದಾರಿಯಲ್ಲಿ ತೈವಾನ್ ದೇಶಕ್ಕೆ ಹೋಗಿಬರಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.

**2024–ಸಿಂ–5.07(ಎ):** National Centre for Biological Sciences (NCBS-TIFR) ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗವು National Centre for Biological Sciences(NCBS-TIFR), a Centre of TATA Institute of Fundamental Research, an autonomous institute of Department of Atomic Energy, Govt. of India and located at GKVK Post, Bellary Road, Bangalore-560 065 – ಇವರ ಸಹಭಾಗಿತ್ವದಲ್ಲಿ ಸಂಶೋಧನೆ ಕೈಗೊಳ್ಳಲು ಅರಣ್ಯ ಪರಿಸರದ ವಿವಿಧ ದತ್ತಾಂಶಗಳನ್ನು, ಜೀವಶಾಸ್ತ್ರದ ಸಂಶೋಧನೆ ನಡೆಸಲು ಹಾಗೂ ಅರಣ್ಯ ಇಲಾಖೆಗೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮರಗಿಡಗಳ ಸಂರಕ್ಷಣೆ ಮತ್ತು ನಿರ್ವಹಣೆ ಮತ್ತು ವನ್ಯಜೀವಿಗಳ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ, ಹವಾಮಾನ ವೈಪರಿತ್ಯದ ಪರಿಣಾಮಗಳು, ಜೈವಿಕತಂತ್ರಜ್ಞಾನ ಮತ್ತು ಜೀವವೈವಿದ್ಯತೆ ಕುರಿತು ವೈಜ್ಞಾನಿಕ, ಶೈಕ್ಷಣಿಕ ಮತ್ತು ತಾಂತ್ರಿಕ ಮಾಹಿತಿಗಳನ್ನು ಹಂಚಿಕೊಳ್ಳಲು ಪರಸ್ಪರ ಸಹಭಾಗಿತ್ವದಲ್ಲಿ ಸಂಶೋಧನೆಯ ಅವಕಾಶಗಳನ್ನು ಬಳಸಿಕೊಳ್ಳಲು ಜೀವಶಾಸ್ತ್ರ, ಸಮಾಜ ವಿಜ್ಞಾನ ಮತ್ತು ಇತರ ಅಂತರ ಶಿಸ್ತಿಯ ವಿಷಯಗಳಲ್ಲಿ ವಿಶೇಷ ಉಪನ್ಯಾಸ, ಸಮ್ಮೇಳನ, ಕಾರ್ಯಾಗಾರ ಮತ್ತು ಕಮ್ಮಟಗಳನ್ನು ಏರ್ಪಡಿಸಲು ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಮತ್ತು ಅಧ್ಯಾಪಕರನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಹಾಗೂ ಅನುದಾನಿತ ಸಂಸ್ಥೆಗಳು ಬಿಡುಗಡೆ ಮಾಡುವ ಸಂಶೋಧನಾ ಅನುದಾನಗಳನ್ನು ಜಂಟಿ ಸಹಭಾಗಿತ್ವದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು National Centre for Biological Sciences(NCBS-TIFR) ಸಂಸ್ಥೆಯ ಸಹಭಾಗಿತ್ವದಲ್ಲಿ Long-Term Monitoring of Climatic and Ecological Paramerters on Campus ಸ್ಥಾಪಿಸಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಒಡಂಬಡಿಕೆ ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿತು.

**2024–ಸಿಂ–5.07(ಬಿ):** ಡಾ.ಬಿ. ತಿಪ್ಪೇಸ್ವಾಮಿ ಇವರ ಪೇಟೆಂಟ್‌ಗೆ ಸಂಬಂಧಿಸಿದ ಪೇಟೆಂಟ್ ವೆಚ್ಚ ಮತ್ತು ನವೀಕರಣ ವೆಚ್ಚ ಪಾವತಿಸುವ ಕುರಿತು.

**ನಿರ್ಣಯ:** ಡಾ.ಬಿ.ತಿಪ್ಪೇಸ್ವಾಮಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ – ಇವರು ತಮ್ಮ ವಿಭಾಗದ ಪ್ರಯೋಗಾಲಯದಲ್ಲಿ ಸಂಶೋಧಿಸಿರುವ "Nano Bio Zine(NBZ)Formulation for Agriculture Applications" ಎಂಬ ಸಂಶೋಧನೆಗೆ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿದ್ದು, The Controller of Patents, The Patent Office, Government of India ಇವರಿಂದ ಸಂಶೋಧನಾ ಪೇಟೆಂಟ್ ದೊರೆಕಿದೆ. ಈ ಪೇಟೆಂಟ್‌ನಿಂದ ವಿಶ್ವವಿದ್ಯಾಲಯವು ಉನ್ನತ ಮಟ್ಟದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳಲು ಸಹಾಯವಾಗುವ ಹಿನ್ನೆಲೆಯಲ್ಲಿ, ಸದರಿ ಪೇಟೆಂಟ್‌ಗಾಗಿ ಭಾರತ ಸರ್ಕಾರಕ್ಕೆ ಪಾವತಿಸಿರುವ ಶುಲ್ಕ ರೂ.85,000/–ಗಳನ್ನು ಮತ್ತು 20 ವರ್ಷಗಳವರೆಗೆ ಸದರಿ ಪೇಟೆಂಟ್‌ನ ನವೀಕರಣದ ಶುಲ್ಕ ರೂ.89,200/–ಗಳು ಸೇರಿದಂತೆ ಒಟ್ಟು ರೂ.1,74.200/–( ರೂಪಾಯಿ ಒಂದು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಇನ್ನೂರು ಮಾತ್ರ)ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಮಂಜೂರಾತಿ ನೀಡಿರುವ ಹಾಗೂ ಪೇಟೆಂಟ್ ಪಡೆಯಲು ಅನುಮತಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. ಮುಂದುವರೆದು, ಸಂಶೋಧನೆಗೆ ಪೇಟೆಂಟ್ ಪಡೆದ ಡಾ.ಬಿ. ತಿಪ್ಪೇಸ್ವಾಮಿರವರಿಗೆ ಸಿಂಡಿಕೇಟ್ ಸಭೆಯು ಅಭಿನಂದನೆ ಸಲ್ಲಿಸಿತು.

## ಪರೀಕ್ಷಾ ವಿಭಾಗ

**2024–ಸಿಂ–5.08:** ವಿಶ್ವವಿದ್ಯಾಲಯದಲ್ಲಿ NEP & Non NEP ಶಿಕ್ಷಣ ನೀತಿಯಡಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ಚರ್ಚೆ:** ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪ್ರತಿವರ್ಷ ಶೇ.10ರಷ್ಟು ಹೆಚ್ಚಿಸಲಾಗುತ್ತಿದೆ. ಅದರಂತೆ 2024–25ನೇ ಸಾಲಿನಲ್ಲೂ ಶೇ.10ರಷ್ಟು ಹೆಚ್ಚಿಸುವಂತೆ ಅನುಮೋದನೆಗಾಗಿ ದಿನಾಂಕ: 19–07–2024ರಂದು ನಡೆದ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಲಾಗಿತ್ತು. ಆದರೆ, ಸದರಿ ಸಭೆಯಲ್ಲಿ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಂದ ಪರೀಕ್ಷಾ ಶುಲ್ಕಗಳ ವಿವರ ಪಡೆದು ಮುಂದಿನ ಸಭೆಗೆ ಮಂಡಿಸುವಂತೆ ನಿರ್ಣಯವಾಗಿರುತ್ತದೆ. ಸಭೆಯ ನಿರ್ಣಯದ ಮೇರೆಗೆ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಶುಲ್ಕಗಳ ಮಾಹಿತಿ ಒದಗಿಸುವಂತೆ ದಿನಾಂಕ: 28–08–2024ರಲ್ಲಿ ಕೋರಲಾಗಿತ್ತು. ಆದರೆ, ಈವರೆಗೂ ಯಾವುದೇ ವಿಶ್ವವಿದ್ಯಾಲಯದಿಂದ ಮಾಹಿತಿ ಬಂದಿರುವುದಿಲ್ಲ. ಪ್ರಸ್ತುತ, 2024–25ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ಸಿದ್ಧತೆ ಆರಂಭಿಸಲಾಗಿದ್ದು, ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಶೇ.10ರಷ್ಟು ಹೆಚ್ಚಿಸಲು ಅನುಮೋದನೆ ಕೋರಿ ವಿಷಯವನ್ನು ಮರು ಮಂಡಿಸಲಾಗಿದೆ ಎಂದರು. ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಶುಲ್ಕ ಹೆಚ್ಚಿಸಿದಲ್ಲಿ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಮಾತನಾಡಿ, ಶೇ.10ರಷ್ಟು ಹೆಚ್ಚಿಸಿದರೂ ಕೂಡ ನಮ್ಮ ಶುಲ್ಕಗಳು ರಾಜ್ಯದ ಇತರೆ ಕೆಲವು ವಿಶ್ವವಿದ್ಯಾಲಯಗಳಿಗಿಂತ ಕಡಿಮೆಯೇ ಇರುತ್ತದೆ ಎಂದರು.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಪರೀಕ್ಷಾ ಶುಲ್ಕ, ಅಂಕಪಟ್ಟಿ/ತಾತ್ಕಾಲಿಕ ಉತ್ತೀರ್ಣತಾ ಪ್ರಮಾಣ ಪತ್ರ/ ಪದವಿ ಪ್ರಮಾಣ ಪತ್ರ/ ನೈಜತೆ ಪರಿಶೀಲನಾ ಶುಲ್ಕ ಸೇರಿದಂತೆ ವಿವಿಧ ಶುಲ್ಕಗಳನ್ನು 2024-25ನೇ ಸಾಲಿನಲ್ಲಿ NEP & Non NEP ಶಿಕ್ಷಣ ನೀತಿಯಡಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಶೇ.10ರಷ್ಟು ಹೆಚ್ಚಿಸಿ ಪರಿಷ್ಕರಿಸಲು ಸಭೆಯು ಅನುಮೋದಿಸಿತು.

**2024-ಸಿಂ-5.09:** ದಿನಾಂಕ:26-08-2024 ಮತ್ತು ದಿನಾಂಕ:27-08-2024 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ನಿರ್ಣಯ: ಫೆಬ್ರವರಿ/ಮಾರ್ಚ್-2024ರ ರಲ್ಲಿ ನಡೆದ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಿರುವ ವಿದ್ಯಾರ್ಥಿಗಳಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿಯು ದಿನಾಂಕ:26-08-2024 ಮತ್ತು 27-08-2024 ರಂದು ವಿಚಾರಣೆ ನಡೆಸಿದ್ದು, ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ದಂಡ ವಿಧಿಸಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಮಿತಿಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ನಿರ್ಣಯ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಈಗಾಗಲೇ ಕಳುಹಿಸಿಕೊಡಲಾಗಿರುವ ಹಿನ್ನೆಲೆಯಲ್ಲಿ, ಸದರಿ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2024-ಸಿಂ-5.09(ಎ):** ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಲಾಜಿಸಿಸ್ ಸಂಸ್ಥೆ ಬೆಂಗಳೂರು ಇವರು ಒದಗಿಸಿದ ಸೇವೆಯನ್ನು Non-NEP ರಿಪಿಟರ್ಸ್ ಹಾಗೂ ದೂರಶಿಕ್ಷಣ ಕೋರ್ಸ್‌ಗಳಿಗೆ ಈ ಹಿಂದಿನ ಕರಾರಿನಂತೆ ಮುಂದುವರೆಸುವ ಕುರಿತು.

ಚರ್ಚೆ: ಕುಲಸಚಿವ (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಲಾಜಿಸಿಸ್ ಸಂಸ್ಥೆಯ ಕರಾರು ಅವಧಿಯು ದಿನಾಂಕ:12-05-2021ಕ್ಕೆ ಮುಕ್ತಾಯಗೊಂಡಿದ್ದು, 2021ರಲ್ಲಿಯೇ ಹೊಸ ಟೆಂಡರ್ ಪ್ರಕ್ರಿಯೆ ನಡೆಸಲಾಗಿತ್ತು. ಆದರೆ, ಸದರಿ ಟೆಂಡರ್‌ಗೆ ಕರ್ನಾಟಕ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ ಹಿನ್ನೆಲೆಯಲ್ಲಿ, ದಿನಾಂಕ:14-07-2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಹೊಸ ಟೆಂಡರ್ ಚಾಲ್ತಿಗೆ ಬರುವವರೆಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿರುವ ಮೆ:ಲಾಜಿಸಿಸ್ ಸಂಸ್ಥೆಯ ಸೇವೆಯನ್ನು ಮುಂದುವರೆಸಲು ನಿರ್ಣಯಿಸಿತ್ತು. ನಂತರದಲ್ಲಿ, 2021-22ರಿಂದ ಕರ್ನಾಟಕ ಸರ್ಕಾರದ ನಿರ್ದೇಶನದಂತೆ U.U.C.M.S ತಂತ್ರಾಂಶವನ್ನು ಕಡ್ಡಾಯ ಬಳಕೆ ಮಾಡಲಾಗುತ್ತಿದೆ. Non-NEP ವಿದ್ಯಾರ್ಥಿಗಳು, ರಿಪಿಟರ್ಸ್ ಹಾಗೂ ದೂರ ಶಿಕ್ಷಣದ ಕೋರ್ಸ್‌ಗಳಿಗೆ ಮಾತ್ರ ಲಾಜಿಸಿಸ್ ಸಂಸ್ಥೆಯ ತಂತ್ರಾಂಶವನ್ನು ಬಳಕೆ ಮಾಡಲಾಗುತ್ತಿದೆ. ಸರ್ಕಾರದ ದಿನಾಂಕ: 27-02-2024ರ ಪತ್ರದಲ್ಲಿ U.U.C.M.S ಗಿಂತ ಮೊದಲು ನೊಂದಣಿಯಾಗಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಪರೀಕ್ಷೆಗಳನ್ನು U.U.C.M.S ತಂತ್ರಾಂಶದಲ್ಲಿಯೇ ಮುಂದುವರೆಸುವ ಅಂಶಗಳನ್ನು ಒಳಗೊಂಡಿದೆಯಾದರೂ, ಸದರಿ ಭಾಗವು ಅಭಿವೃದ್ಧಿ ಹಂತದಲ್ಲಿರುವುದರಿಂದ ಹಳೆಯ ತಂತ್ರಾಂಶ ಬಳಕೆಯಲ್ಲಿ ನೋಂದಣಿಯಾಗಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನಂತೆ ಮುಂದಿನ 6 ತಿಂಗಳು ಮುಂದುವರೆಸಿಕೊಂಡು ಹೋಗುವಂತೆ ತಿಳಿಸಿದ್ದರು. ನಂತರ, ದಿನಾಂಕ:19-10-2024ರಂದು ಸರ್ಕಾರವು ಕಳುಹಿಸಿದ ಇನ್ನೊಂದು ಪತ್ರದಲ್ಲಿ ಮುಂದಿನ ಸೂಚನೆ ನೀಡುವವರೆಗೆ ಹಳೆಯ ತಂತ್ರಾಂಶ ಬಳಕೆಯಲ್ಲಿ ನೋಂದಣಿಯಾಗಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನಂತೆ ಮುಂದುವರೆಸಿಕೊಂಡು ಹೋಗಲು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಲಾಜಿಸಿಸ್ ಸಂಸ್ಥೆಯ ತಂತ್ರಾಂಶವನ್ನು Non-NEP ಹಾಗೂ ದೂರಶಿಕ್ಷಣ ಕೋರ್ಸ್‌ಗಳಿಗೆ ಉಪಯೋಗಿಸಿಕೊಳ್ಳುವ ಕುರಿತು ಸಭೆಯ ಅನುಮೋದನೆಗಾಗಿ ಹಾಗೂ ಬಳಕೆ ಮಾಡುವುದಾದಲ್ಲಿ ಲಾಜಿಸಿಸ್ ಸಂಸ್ಥೆಯವರು ಕೋರಿರುವ ದರವನ್ನು ಪರಿಷ್ಕರಿಸುವ ಕುರಿತು ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಸದಸ್ಯರಾದ ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಲಾಜಿಸಿಸ್ ಏನು ಕೆಲಸ ಮಾಡುತ್ತದೆ ಮತ್ತು U.U.C.M.S ಏನು ಕೆಲಸ ಮಾಡುತ್ತದೆ. ಡಿಜಿಟಲ್ ಮೌಲ್ಯಮಾಪನ ಜಾರಿಗೆ ತಂದರೆ ಈ ಸಮಸ್ಯೆಗಳು ಇರುವುದಿಲ್ಲವಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಎರಡೂ ತಂತ್ರಾಂಶಗಳೂ ಒಂದೇ ಸ್ವರೂಪದ್ದಾದ್ದಾರೂ ಕೂಡ ಲಾಜಿಸಿಸ್ ಬಹಳ ವರ್ಷಗಳಿಂದ ವಿಶ್ವವಿದ್ಯಾಲಯಕ್ಕೆ ಸೇವೆ ಒದಗಿಸುತ್ತದೆ. ಆದರೆ, N.E.P ಜಾರಿಯಾದ ನಂತರ U.U.C.M.S ತಂತ್ರಾಂಶವನ್ನು ಸರ್ಕಾರ ಒದಗಿಸುತ್ತಿದೆ. ಇದರ ಕಾರ್ಯಗಳು ಸಂಯೋಜನೆ ಪ್ರಕ್ರಿಯೆಯಿಂದಲೇ ಆರಂಭವಾಗುತ್ತದೆ. ಪ್ರಸ್ತುತ U.U.C.M.S ತಂತ್ರಾಂಶದಲ್ಲಿ Non-N.E.P ಹಾಗೂ ದೂರಶಿಕ್ಷಣ ಕೋರ್ಸ್‌ಗಳಿಗೆ ಅವಕಾಶವಿಲ್ಲದ ಪ್ರಯುಕ್ತ ಲಾಜಿಸಿಸ್ ತಂತ್ರಾಂಶದ ಮೂಲಕ ನಿರ್ವಹಿಸಬೇಕಾಗುತ್ತದೆಂದರು

ಮುಂದುವರೆದು ಮಾತನಾಡಿದ ಶ್ರೀ ಬಿ.ಎನ್.ಶಶಿಧರ್‌ರವರು, ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಡಿಜಿಟಲ್ ಮೌಲ್ಯಮಾಪನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ್ದು, ಇದರಿಂದ ಹಣ ಮತ್ತು ಸಮಯ ಉಳಿತಾಯವಾಗುತ್ತದೆ. ವಿದ್ಯಾರ್ಥಿಗಳಿಗೂ ಶೀಘ್ರ ಫಲಿತಾಂಶ ದೊರೆಯುತ್ತದೆ. ಆದುದರಿಂದ, ನಮ್ಮಲ್ಲಿಯೂ ಶೀಘ್ರವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಡಿಜಿಟಲ್ ಮೌಲ್ಯಮಾಪನಕ್ಕಾಗಿ ಈಗಾಗಲೇ ಇ–ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಇದರಲ್ಲಿ ಎರಡು ಸಂಸ್ಥೆಗಳು ಭಾಗವಹಿಸಿ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆಗೊಂಡಿದ್ದವು. ಫೈನಾನ್ಸಿಯಲ್ ಬಿಡ್‌ನಲ್ಲಿ ಮೆ:ಯಶಸ್ವಿನಿ ಟೆಕ್ನಾಲಜೀಸ್ ಇವರು ಕಡಿಮೆ ದರ ನಮೂದಿಸಿದ್ದು, ಎಲ್–1 ಆಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಿಂಡಿಕೇಟ್ ಅನುಮೋದನೆ ನೀಡಿದರೆ, ಮುಂಬರುವ ಬೆಸ ಸೆಮಿಸ್ಟರ್ ಪರೀಕ್ಷೆಗಳಿಂದಲೇ ಡಿಜಿಟಲ್ ಮಾಲ್ಯಮಾಪನವನ್ನು ಜಾರಿಗೊಳಿಸಲಾಗುವುದು ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ ಬಹಳಷ್ಟು ಅನುಕೂಲಗಳಿರುವುದರಿಂದ ಡಿಜಿಟಲ್ ಮಾಲ್ಯಮಾಪನವನ್ನು ಅನುಷ್ಠಾನಗೊಳಿಸಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಮ್ಮತಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದಿನಾಂಕ:19–10–2024ರ ಸರ್ಕಾರದ ಪತ್ರದಲ್ಲಿ ಮುಂದಿನ ಸೂಚನೆ ನೀಡುವವರೆಗೆ ಹಳೆಯ ತಂತ್ರಾಂಶ ಬಳಕೆಯಲ್ಲಿ ನೋಂದಣಿಯಾಗಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನಂತೆ ಮುಂದುವರೆಸಿಕೊಂಡು ಹೋಗಲು ತಿಳಿಸಿರುವ ಹಿನ್ನೆಲೆಯಲ್ಲಿ, ಲಾಜಿಸಿಸ್ ಸಂಸ್ಥೆಯ ತಂತ್ರಾಂಶವನ್ನು Non-N.E.P ಹಾಗೂ ದೂರಶಿಕ್ಷಣ ಕೋರ್ಸ್‌ಗಳಿಗೆ ಈಗಿರುವ ದರದಲ್ಲಿಯೇ ಉಪಯೋಗಿಸಿಕೊಳ್ಳಲು ಸಭೆಯು ಅನುಮತಿಸಿತು.

ಮುಂದುವರೆದು, ಡಿಜಿಟಲ್ ಮೌಲ್ಯಮಾಪನಕ್ಕಾಗಿ ನಡೆಸಲಾದ ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಿದ ಸಭೆಯು, ಮುಂಬರುವ ಬೆಸ ಸೆಮಿಸ್ಟರ್ ಪರೀಕ್ಷೆಗಳಿಂದಲೇ ಡಿಜಿಟಲ್ ಮಾಲ್ಯಮಾಪನವನ್ನು ಜಾರಿಗೊಳಿಸಲು ಸರ್ವಾನುಮತದಿಂದ ನಿರ್ಣಯಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2024–ಸಿಂ–5.10:** 2025–26ನೇ ಸಾಲಿನ ಸಂಯೋಜನಾ ಶುಲ್ಕಗಳ ಪರಿಷ್ಕರಣೆ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದ ಪ್ರಕಾರ ವಿಶ್ವವಿದ್ಯಾಲಯದ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಗಳನ್ನು ಪ್ರಾರಂಭಿಸಿ, ಸಂಯೋಜನಾ ಶುಲ್ಕದ ಮಾಹಿತಿಯನ್ನು ದಿನಾಂಕ:25–10–2024ರ ಒಳಗಾಗಿ U.U.C.M.S ತಂತ್ರಾಂಶದಲ್ಲಿ ಅಳವಡಿಸುವ ಅಗತ್ಯವಿದ್ದುದ್ದರಿಂದ, ದಿನಾಂಕ:18–10–2024ರಂದು ಜರುಗಿದ ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ಸಭೆಯ ನಿರ್ಣಯದ ಮೇರೆಗೆ ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳನ್ನು ಪರಿಷ್ಕರಿಸಿ ಶೇಕಡ 7% ರಷ್ಟು ಹೆಚ್ಚಿಸಿ, ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಶೇ.10 ರಷ್ಟು ಹೆಚ್ಚಿಸಲಾಗಿದೆ. ಆದರೆ, ಕಾಲೇಜುಗಳ ಸಂಯೋಜನಾ ಶುಲ್ಕವನ್ನು ಶೇ.7ರಷ್ಟು ಮಾತ್ರ ಏಕೆ ಹೆಚ್ಚಿಸಲಾಗಿದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಸಂಯೋಜನಾ ಶುಲ್ಕವನ್ನು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಕೂಡ ಶೇ.10 ರಷ್ಟು ಹೆಚ್ಚಿಸಿ. ಇದರಿಂದ ವಿದ್ಯಾರ್ಥಿಗಳು ಹಾಗೂ ಕಾಲೇಜುಗಳಿಗೆ ಸರಿ ಸಮನಾಗಿ ಶುಲ್ಕ ಪರಿಷ್ಕರಣೆಯಾದಂತಾಗುತ್ತದೆ ಎಂದರು. ಡಾ. ಅನಂತ ಎಸ್. ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪದವಿ ಕಾಲೇಜುಗಳ ಪ್ರವೇಶಾತಿ ಕಡಿಮೆಯಾಗುತ್ತಿದೆ. ಕಾಲೇಜುಗಳಿಗೆ ಆರ್ಥಿಕ ಹೊರೆಯಾಗಬಾರದೆಂಬ ಉದ್ದೇಶದಿಂದ ಕಾಲೇಜು ಅಭಿವೃದ್ಧಿ ಪರಿಷತ್ತಿನ ಸಲಹಾ ಸಮಿತಿ ಸಭೆಯಲ್ಲಿ ಶೇ.7ರಷ್ಟು ಹೆಚ್ಚಿಸುವಂತೆ ನಿರ್ಣಯವಾಗಿರುವುದನ್ನು ಅನುಮೋದಿಸುವಂತೆ ಕೋರಿದರು. ಡಾ.ಸಣ್ಣಹನುಮಪ್ಪರವರು ಮಾತನಾಡಿ ಶೇ.7 ಅಥವಾ ಶೇ.10 ಎಷ್ಟೇ ಹೆಚ್ಚಿಸಿದರೂ, ಅದನ್ನು ಕಾಲೇಜಿನವರು ವಿದ್ಯಾರ್ಥಿಗಳಿಂದಲೇ ವಸೂಲು ಮಾಡುತ್ತಾರೆ. ಅಂತಿಮವಾಗಿ ವಿದ್ಯಾರ್ಥಿಗಳಿಗೇ ಹೊರೆಯಾಗುತ್ತದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ದಿನಾಂಕ:18-10-2024 ರಂದು ಜರುಗಿದ ಕಾಲೇಜು ಅಭಿವೃದ್ಧಿ ಪರಿಷತ್ ಸಲಹಾ ಸಮಿತಿ ಸಭೆಯ ನಿರ್ಣಯದ ಮೇರೆಗೆ 2025-26ನೇ ಸಾಲಿನ ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳನ್ನು ಪರಿಷ್ಕರಿಸಿ ಶೇಕಡ 7% ರಷ್ಟು ಹೆಚ್ಚಿಸಿ, ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024-ಸಿಂ-5.11:** ಸ್ನಾತಕ/ಸ್ನಾತಕೋತ್ತರ/ಶಿಕ್ಷಣ ಪದವಿ ಕೋರ್ಸ್‌ಗಳ ಸಂಯೋಜನೆಗಾಗಿ ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸುವ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ, ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಡಾ.ನಾಗರಾಜ್ ರವರು ಮಾತನಾಡಿ, ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2025-26ನೇ ಸಾಲಿನ ಸಂಯೋಜನೆ ಪ್ರಕ್ರಿಯೆಗಳು ಪ್ರಾರಂಭವಾಗಿದ್ದು, ಕಾಲೇಜುಗಳಿಗೆ ಸಂಯೋಜನಾ ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ-2000 ಪ್ರಕರಣ 59(6)ರ ಪ್ರಕಾರ ಕಾಲೇಜುಗಳ ಅರ್ಜಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಸಲ್ಲಿಸಲಾಗುವುದು ಮತ್ತು ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಸಲುವಾಗಿ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಡಾ.ಅನಂತ್ ರವರು ಮಾತನಾಡಿ, ಸ್ಥಳೀಯ ತಪಾಸಣಾ ಸಮಿತಿಯನ್ನು ರೋಸ್ಟರ್ ಪ್ರಕಾರ ರಚಿಸಬೇಕು. ಸಮಿತಿಯಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಸದಸ್ಯರು ಇರಬೇಕು ಎಂದರು. ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ, ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರನ್ನು ಕೂಡ ನೇಮಕ ಮಾಡಬೇಕು ಎಂದರು. ಸಿ.ಡಿ.ಸಿ. ನಿರ್ದೇಶಕರು ಮಾತನಾಡಿ, ಸರ್ಕಾರದ ನಿಯಮಗಳ ಪ್ರಕಾರವೇ ರೋಸ್ಟರ್ ಪಾಲಿಸಿಕೊಂಡು ಸ್ಥಳೀಯ ತಪಾಸಣಾ ಸಮಿತಿಗಳನ್ನು ರಚಿಸಲಾಗುವುದು. ಸರ್ಕಾರದ ನಿಯಮದಲ್ಲಿ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಅವಕಾಶವಿಲ್ಲ ಎಂದರು.

**ನಿರ್ಣಯ:** ಚರ್ಚೆಯ ನಂತರ, 2025-26ನೇ ಸಾಲಿನ ಸಂಯೋಜನೆ ಪ್ರಕ್ರಿಯೆಗಳಿಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲು ಸಭೆಯು ಅನುಮೋದನೆ ನೀಡಿತು.

**2024-ಸಿಂ-5.12:** 2024-25ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸ್/ ವಿಷಯಗಳಿಗೆ ನವೀನ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** 2024-25ನೇ ಸಾಲಿನ ಸಂಯೋಜನೆ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ, ಸರ್ಕಾರವು ವಿಶ್ವವಿದ್ಯಾಲಯದ ಕೆಲವು ಸಂಯೋಜಿತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಸ ಕೋರ್ಸ್/ವಿಷಯಗಳಿಗೆ ನವೀನ ಸಂಯೋಜನೆ ನೀಡುವಂತೆ ತಿಳಿಸಿದ ಮೇರೆಗೆ, ಸಂಬಂಧಿಸಿದ ಕಾಲೇಜುಗಳಿಂದ ಸಂಯೋಜನಾ ಅರ್ಜಿ ಪಡೆದು, ಸದರಿ ಪದವಿಗಳ ಸಂಯೋಜನೆ ಸಂಬಂಧ ಕಾಲೇಜುಗಳಿಗೆ ಸ್ಥಳೀಯ ತಪಾಸಣಾ ಸಮಿತಿ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಗಳನ್ನು ಆಧರಿಸಿ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರವು ವಿಶ್ವವಿದ್ಯಾಲಯದ ಪ್ರಸ್ತಾವನೆಗಳಿಗೆ ಅನುಮತಿ ನೀಡಿದ ಹಿನ್ನಲೆಯಲ್ಲಿ, ಈ ಕೆಳಕಂಡ ಕಾಲೇಜುಗಳು ಕೋರಿದ್ದ ನವೀನ ಕೋರ್ಸ್/ವಿಷಯಗಳಿಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಸಂಯೋಜನೆ ಆದೇಶ ನೀಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| ಕ್ರ ಸಂ. | ಕಾಲೇಜಿನ ಹೆಸರು | ಹೊಸ ಕೋರ್ಸ್ : ಐಚ್ಛಿಕ ವಿಷಯ | ಪ್ರವೇಶ ಮಿತಿ |
|---|---|---|---|
| 1. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಳಸ | ಬಿ.ಸಿ.ಎ., | 60 |
| 2. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತರೀಕೆರೆ | ಬಿ.ಎಸ್.ಡಬ್ಲ್ಯೂ | 40 |
| 3. | ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ | ಬಿ.ಸಿ.ಎ., ಬಿ.ಎಸ್.ಡಬ್ಲ್ಯೂ., ಬಿ.ಎಸ್ಸಿ. (PMC) | 40 |

## ಹಣಕಾಸು ವಿಭಾಗ

**2024–ಸಿಂ–5.13:** 2024–25ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್ ರವರು ದಿನಾಂಕ:16–10–2024ರಂದು ನಡೆದ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆಗೆ ಮಂಡಿಸಿದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಹಣಕಾಸು ಸಮಿತಿಗೆ ನೇಮಿಸುವ ಸಿಂಡಿಕೇಟ್ ಸದಸ್ಯರನ್ನು ಪ್ರತಿವರ್ಷ ಬದಲಿಸಿದಲ್ಲಿ ಹೆಚ್ಚಿನ ಸದಸ್ಯರಿಗೆ ಅವಕಾಶ ಸಿಗುತ್ತದೆ ಎಂದರು. ಲಕ್ಷ್ಮಿಕಾಂತ ಚಿಮನೂರ್‌ರವರು ಇದಕ್ಕೆ ಧ್ವನಿಗೂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:16–10–2024ರಂದು ನಡೆದ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಅನುಮೋದಿಸಿದ ಸಭೆಯು ಹಣಕಾಸು ಸಮಿತಿಗೆ ನೇಮಿಸುವ ಸಿಂಡಿಕೇಟ್ ಸದಸ್ಯರನ್ನು ಪ್ರತಿವರ್ಷ ಬದಲಿಸಬೇಕೆಂದು ನಿರ್ಣಯಿಸಿತು.

**2024–ಸಿಂ–5.13(ಎ):** 2023–24ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

**ನಿರ್ಣಯ:** ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ಸಿದ್ಧಪಡಿಸಿ, ದಿನಾಂಕ:16–10–2024ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದಿತವಾಗಿರುವ ವಿಶ್ವವಿದ್ಯಾಲಯದ 2023–24ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2024–ಸಿಂ–5.15:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಿರುವುದನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು ಹಾಗೂ ವಿಭಾಗಾಧ್ಯಕ್ಷರ 02 ವರ್ಷಗಳ ಅವಧಿ ಮುಗಿಯುವ ದಿನಾಂಕ ಪೂರ್ವನಿರ್ಧಾರಿತವಾಗಿರುವ ಹಿನ್ನೆಲೆಯಲ್ಲಿ ಸ್ಥಿರೀಕರಣಕ್ಕೆ ಮಂಡಿಸುವುದನ್ನು ಕಡಿಮೆ ಮಾಡಿ, ಸಿಂಡಿಕೇಟ್ ಅನುಮೋದನೆ ಪಡೆದುಕೊಂಡ ನಂತರವೇ ನೇಮಕ ಮಾಡಲು ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

| ಕ್ರ ಸಂ. | ಹೆಸರು | ಹುದ್ದೆ | ವಿಭಾಗ |
|---|---|---|---|
| 01 | ಡಾ. ಚಂದ್ರಶೇಖರ್ ಎಸ್. | ಪ್ರಾಧ್ಯಾಪಕರು | ಸಮಾಜಶಾಸ್ತ್ರ |
| 02 | ಡಾ. ಯಾದವ ದಶರಥರಾವ್ ಬೋಡ್ಕೆ | ಪ್ರಾಧ್ಯಾಪಕರು | ರಸಾಯನಶಾಸ್ತ್ರ |
| 03 | ಡಾ. ವರ್ಗೀಸ್ ಪಿ.ಎ. | ಪ್ರಾಧ್ಯಾಪಕರು | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
[illegible]-577 451

**2024–ಸಿಂ–5.16:** ಪ್ರಾಧ್ಯಾಪಕರ ಪಟ್ಟಿಯನ್ನು ಅನುಮೋದನೆಗಾಗಿ ಮರು ಮಂಡಿಸಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಘಟಕ ಕಾಲೇಜುಗಳು ಹಾಗೂ ನೇರ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರು, ಗ್ರಂಥಾಲಯ ಹಾಗೂ ದೈಹಿಕ ಶಿಕ್ಷಣ ವಿಭಾಗದಲ್ಲಿ ಯು.ಜಿ.ಸಿ. ವೇತನ ಪಡೆಯುವ ಸಿಬ್ಬಂದಿಗಳಿಗೆ ವೃತ್ತಿಪದೋನ್ನತಿ ನೀಡಲು ಹಾಗೂ ಹೊಸ ನೇಮಕಾತಿಗಳ ಉದ್ದೇಶಕ್ಕಾಗಿ ಯು.ಜಿ.ಸಿ. ನಿಯಮದ ಪ್ರಕಾರ ನೇಮಕಾತಿ ಮಂಡಳಿಗಳನ್ನು ರಚಿಸುವ ಸಲುವಾಗಿ ರಾಜ್ಯದ ಹಾಗೂ ಹೊರ ರಾಜ್ಯಗಳ ಕೆಲವು ವಿಶ್ವವಿದ್ಯಾಲಯಗಳಿಂದ ಅಧ್ಯಾಪಕರುಗಳನ್ನೊಳಗೊಂಡ ವಿವಿಧ ವಿಷಯಗಳ ಪ್ರಾಧ್ಯಾಪಕರ ಪಟ್ಟಿಯನ್ನು ಸಭೆಯು ಅನುಮೋದಿಸಿತು.

**2024–ಸಿಂ–5.17:** ಡಾ.ಮಹೇಶ್ ಎ. ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಇವರನ್ನು ಕುವೆಂಪು ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ವರ್ಗಾವಣೆ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಡಾ.ಮಹೇಶ್ ಎ. ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಇವರು ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ವರ್ಗಾವಣೆ ಹೊಂದಲು ಇಚ್ಛಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸರ್ಕಾರವು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಸದರಿಯವರ ವರ್ಗಾವಣೆ ಕುರಿತಂತೆ ಸಂಪೂರ್ಣ ಮಾಹಿತಿಯೊಂದಿಗೆ ಹಾಗೂ ಸೂಕ್ತ ಶಿಫಾರಸ್ಸಿನೊಂದಿಗೆ ಸ್ಪಷ್ಟ ಅಭಿಪ್ರಾಯ ನೀಡುವಂತೆ ತಿಳಿಸಿರುತ್ತಾರೆ. ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿದ್ದು, ಒಬ್ಬರೇ ಖಾಯಂ ಪ್ರಾಧ್ಯಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿಭಾಗದಲ್ಲಿ ಎರಡು ಸಹ ಪ್ರಾಧ್ಯಾಪಕ ಮತ್ತು ಎರಡು ಸಹಾಯಕ ಪ್ರಾಧ್ಯಾಪಕ ಹುದ್ದೆಗಳು ಖಾಲಿ ಇವೆ. ಹೆಚ್ಚಿನ ಖಾಯಂ ಅಧ್ಯಾಪಕರಿದ್ದಲ್ಲಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದರು. ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಖಾಯಂ ಅಧ್ಯಾಪಕರ ಕೊರತೆ ಇರುವುದರಿಂದ, ಅನುಮತಿ ನೀಡಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ ಡಾ.ಮಹೇಶ್ ಎ. ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಇವರು ಕುವೆಂಪು ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಹುದ್ದೆ ರಹಿತವಾಗಿ ವರ್ಗಾವಣೆ ಹೊಂದಲು ಅನುಮೋದನೆ ನೀಡಲು ನಿರ್ಣಯಿಸಿದ ಸಭೆಯು ಅವರಿಗೆ ನಿರಾಪೇಕ್ಷಣಾ ಪತ್ರ ನೀಡಲು ಅನುಮೋದಿಸಿತು.

**2024–ಸಿಂ–5.18:** 2025–26ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಮುಂಬರುವ 2025–26ನೇ ಸಾಲಿನಲ್ಲಿ ಏಪ್ರಿಲ್–2025 ರಿಂದ ಮಾರ್ಚ್–2026ನೇ ಆರ್ಥಿಕ ವರ್ಷಾಂತ್ಯದವರೆಗೆ ವಯೋನಿವೃತ್ತಿ ಹೊಂದಲಿರುವ ಈ ಕೆಳಕಂಡ ಅಧ್ಯಾಪಕ/ ಅಧ್ಯಾಪಕೇತರ ನೌಕರರುಗಳ ಪಟ್ಟಿಯನ್ನು ಅನುಮೋದಿಸಿದ ಸಭೆಯು ಸದರಿ ನೌಕರರು ವಯೋನಿವೃತ್ತಿ ಹೊಂದಲು ಅನುಮತಿಸಿತು.

| ಕ್ರ ಸಂ. | ಹೆಸರು ಮತ್ತು ಹುದ್ದೆ ಡಾ/ಶ್ರೀ/ಶ್ರೀಮತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನಿವೃತ್ತಿ ದಿನಾಂಕ |
|---|---|---|---|---|
| | **ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು** | | | |
| 1 | ವಿ.ಕೃಷ್ಣ, ಹಿರಿಯ ಪ್ರಾಧ್ಯಾಪಕರು | 20–05–1963 | 17–08–1996 | 31–05–2025 |
| 2 | ನಾರಾಯಣ ಜೆ. ಹಿರಿಯ ಪ್ರಾಧ್ಯಾಪಕರು | 05–06–1963 | 06–08–1996 | 30–06–2025 |
| 3 | ರಾಜೇಶ್ವರ, ಎ.ಎನ್. ಹಿರಿಯ ಪ್ರಾಧ್ಯಾಪಕರು | 04–07–1963 | 08–03–2007 | 31–07–2025 |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| | | | | |
|---|---|---|---|---|
| 4 | ವೈ.ಎಲ್.ಕೃಷ್ಣಮೂರ್ತಿ ಹಿರಿಯ ಪ್ರಾಧ್ಯಾಪಕರು | 26-08-1963 | 03-08-1996 | 31-08-2025 |
| 5 | ಯೋಗೀಶ್ ಎಸ್.ಎನ್. ಹಿರಿಯ ಪ್ರಾಧ್ಯಾಪಕರು | 18-11-1963 | 19-08-1994 | 30-11-2025 |
| 6 | ವೈ.ಎಲ್.ರಾಮಚಂದ್ರ ಹಿರಿಯ ಪ್ರಾಧ್ಯಾಪಕರು | 03-12-1963 | 03-08-1996 | 31-12-2025 |
| | **ಸಹ್ಯಾದ್ರಿ ಕಲಾ ಕಾಲೇಜು** | | | |
| 1) | ಸೈಯದ್ ಸನಾವುಲ್ಲ, ಪ್ರಾಧ್ಯಾಪಕರು | 13-07-1963 | 03-08-1996 | 31-07-2025 |
| | **ಸಹ್ಯಾದ್ರಿ ವಿಜ್ಞಾನ ಕಾಲೇಜು** | | | |
| 1) | ನಫೀಸ ಬೇಗಂ ಪ್ರಾಧ್ಯಾಪಕರು | 26-07-1963 | 10-01-2007 | 31-07-2025 |
| | **ಅಧ್ಯಾಪಕೇತರ ಅಧಿಕಾರಿ /ನೌಕರರು** | | | |
| 1 | ವಾಸುದೇವಮೂರ್ತಿ ಬಿ.ಕೆ. ಮಾಡಲರ್ ಕಂ ಗೈಡ್ (ಕೆಳದಿ ವಸ್ತು ಸಂಗ್ರಹಾಲಯ) | 05-04-1965 | 11-02-1993 | 30-04-2025 |
| 2 | ನಿಂಗಣ್ಣ ಬಿಳೇಬಾವಿ, ಕಿರಿಯ ಸಹಾಯಕರು | 20-04-1965 | 19-01-2006 | 30-04-2025 |
| 3 | ಪಾಪಾನಾಯ್ಕ ಆರ್. ಕಿರಿಯ ಸಹಾಯಕರು | 10-04-1965 | 20-02-2003 | 30-04-2025 |
| 4 | ಚಂದ್ರಬಾಬು ಎ. ಅಟೆಂಡರ್ | 14-04-1965 | 24-02-1992 | 30-04-2025 |
| 5 | ಎನ್.ಡಿ. ವಿರೂಪಾಕ್ಷ, ದೈಹಿಕ ಶಿಕ್ಷಣ ನಿರ್ದೇಶಕರು | 05-05-1965 | 10-08-1994 | 31-05-2025 |
| 6 | ಗೀತಾ ಕೆ.ಆರ್. ಪ್ರಥಮ ದರ್ಜೆ ಸಹಾಯಕರು | 02-05-1965 | 02-12-1994 | 31-05-2025 |
| 7 | ನಾಗರಾಜ ಜಿ.ಎಂ. ಕಿರಿಯ ಸಹಾಯಕರು | 01-06-1965 | 08-11-1994 | 31-05-2025 |
| 8 | ಮಂಜುನಾಥ ಎನ್. ಕಿರಿಯ ಸಹಾಯಕರು | 22-05-1965 | 19-01-2006 | 31-05-2025 |
| 9 | ವರದರಾಜು ಎಂ.ಇ. ಹಿರಿಯ ಸಹಾಯಕರು | 19-06-1965 | 05-08-1994 | 30-06-2025 |
| 10 | ಬೇಬಿ ಸಿ. ಪ್ರಥಮ ದರ್ಜೆ ಸಹಾಯಕರು | 22-06-1965 | 01-12-1994 | 30-06-2025 |
| 11 | ಉಷಾ ಜಿ.ಎಂ. ಕಿರಿಯ ಸಹಾಯಕರು | 27-06-1965 | 19-01-2006 | 30-06-2025 |
| 12 | ತಮ್ಮೇಗೌಡ ಕೆ. ಅಟೆಂಡರ್ | 01-06-1965 | 16-10-1989 | 31-05-2025 |
| 13 | ಶಾಂತರಾಜು ಎಲ್.ಎನ್. ಪ್ರಥಮ ದರ್ಜೆ ಸಹಾಯಕರು | 15-07-1965 | 05-08-1994 | 31-07-2025 |
| 14 | ಕುಪ್ಪಸ್ವಾಮಿ ಕಿರಿಯ ಸಹಾಯಕರು | 08-07-1965 | 19-01-2006 | 31-07-2025 |
| 15 | ಸಿದ್ಧರಾಮ ಎಂ. ಪ್ರಥಮ ದರ್ಜೆ ಸಹಾಯಕರು | 13-08-1965 | 02-12-1994 | 31-08-2025 |
| 16 | ಅರ್ಚನಕುಮಾರಿ ಸಹಾಯಕ ಕುಲಸಚಿವರು | 07-09-1965 | 05-08-1994 | 30-09-2025 |
| 17 | ಪರಮೇಶ ಅಟೆಂಡರ್ | 11-10-1965 | 03-01-1990 | 31-10-2025 |
| 18 | ಸಾವಿತ್ರಮ್ಮ ಆರ್. ಪ್ರಥಮ ದರ್ಜೆ ಸಹಾಯಕರು | 21-12-1965 | 02-12-1994 | 31-12-2025 |
| 19 | ಹರೀಶ್‌ಕುಮಾರ್ ಎಲ್. ಕಿರಿಯ ಸಹಾಯಕರು | 27-12-1965 | 24-08-1995 | 31-12-2025 |
| 20 | ಮಲ್ಲೇಶಪ್ಪ ಜಿ. ದ್ವಿತೀಯ ದರ್ಜೆ ಸಹಾಯಕರು | 10-12-1965 | 01-07-1987 | 31-12-2025 |
| 21 | ಗೋವಿಂದರಾಜು ಎಸ್.ವಿ. ಅಟೆಂಡರ್ | 20-02-1966 | 18-04-1995 | 28-02-2026 |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
577 451

**2024–ಸಿಂ–5.19:** ನ್ಯಾಯಾಲಯದಲ್ಲಿರುವ ಪ್ರಕರಣಗಳ ಮಾಹಿತಿ ಕುರಿತು.

**ನಿರ್ಣಯ:** ದಿನಾಂಕ:19–07–2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸದಸ್ಯರಾದ ಡಾ. ಅನಂತ್ ರವರು ಕೇಳಿದ ಪ್ರಕಾರ ಒದಗಿಸಲಾದ ಅನುಮೋದಿತ ವಕೀಲರ ಪಟ್ಟಿ, ಹೈಕೋರ್ಟ್ ಹಾಗೂ ಇತರೆ ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳ ವಿವರ, ನಿವೃತ್ತ ನ್ಯಾಯಾಧೀಶರ ಸಮಿತಿಗಳು ನಡೆಸುತ್ತಿರುವ ವಿಚಾರಣೆಗಳ ಮಾಹಿತಿಯನ್ನು ಸಭೆಯು ಗಮನಿಸಿತು.

ಮುಂದುವರೆದು, ಶಿಕ್ಷಣ ಮತ್ತು ಸೇವಾ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ವಕೀಲರನ್ನು ವಿಶ್ವವಿದ್ಯಾಲಯದ ಕಾನೂನು ತಜ್ಞರ ಪಟ್ಟಿಗೆ ಸೇರ್ಪಡೆಗೊಳಿಸಲು ಮತ್ತು ಶಿವಮೊಗ್ಗ ಮತ್ತು ಭದ್ರಾವತಿ ನ್ಯಾಯಾಲಯಗಳ ಪ್ರಕರಣಗಳನ್ನು ನಿಭಾಯಿಸಲು ಸ್ಥಳೀಯ ತಜ್ಞ ವಕೀಲರನ್ನು ನೇಮಕ ಮಾಡಲು ಸಭೆಯು ನಿರ್ಣಯಿಸಿತು.

**2024–ಸಿಂ–5.20:** ದಿ॥ ಕೆ.ವಿ. ನಾಗರಾಜ – ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಯು.ಸಿ.ಸಿ.ಎಫ್. ಘಟಕದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದ, ಶ್ರೀ ಕೆ.ವಿ.ನಾಗರಾಜ್‌ರವರು ದಿನಾಂಕ: 23–12–2023 ರಂದು ಅಕಾಲಿಕ ಮರಣ ಹೊಂದಿದ ಕಾರಣ ಅವರ ಪ್ರಥಮ ಪುತ್ರರಾದ ಶ್ರೀ ಸಂಗಮ್ ಎನ್. ಇವರು ಅನುಕಂಪ ಆಧಾರದ ಮೇಲೆ ಉದ್ಯೋಗವನ್ನು ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಅವರ ಮನವಿಯೊಂದಿಗೆ ದಿ॥ ಕೆ.ವಿ.ನಾಗರಾಜ ಇವರ ಪತ್ನಿಯಾದ ಶ್ರೀಮತಿ ನಂದಕುಮಾರಿ ಎಸ್ ಹಾಗೂ ಅವರ ಎರಡನೆ ಮಗ ಶ್ರೀ ರಂಜೀಶ್ ಎನ್. ಇವರುಗಳು ಶ್ರೀ ಸಂಗಮ್ ಎನ್. ಇವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ತಮ್ಮಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಒಪ್ಪಿಗೆ ಪ್ರಮಾಣ ಪತ್ರ (ಅಫಿಡೆವಿಟ್)ವನ್ನು ನೀಡಿರುತ್ತಾರೆ.

ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ನೇಮಕಾತಿಯನ್ನು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ನೇಮಕಾತಿ) ನಿಯಮ 1996 ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸೇವಾ ಅನುಕಂಪದ ನೇಮಕಾತಿ ಪರಿನಿಯಮ 1991ರ ಪ್ರಕಾರ ಮಾಡಲಾಗುತ್ತಿದೆ.

ಮುಂದುವರೆದು ಮಾತನಾಡಿದ ಕುಲಸಚಿವರು, ಮೃತ ನೌಕರರಾದ ದಿ॥ ಕೆ.ವಿ.ನಾಗರಾಜ ಇವರ ಮೊದಲನೆಯ ಮಗನಾದ ಶ್ರೀ ಸಂಗಮ್ ಎನ್. ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾಗಿದ್ದು, ಅವರಿಗೆ ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಯು.ಸಿ.ಸಿ.ಎಫ್ ಘಟಕದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮೃತ ನೌಕರರಾದ ದಿ॥ ಕೆ.ವಿ.ನಾಗರಾಜ ಇವರ ಮೊದಲನೆಯ ಮಗನಾದ ಶ್ರೀ ಸಂಗಮ್ ಎನ್. ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾಗಿರುವುದನ್ನು ಪರಿಗಣಿಸಿ, ಅವರಿಗೆ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ ಅನುಕಂಪದ ಆಧಾರದಲ್ಲಿ ನಿಯಮಾನುಸಾರ ನೇಮಕ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2024–ಸಿಂ–5.21:** ದಿವಂಗತ ಎನ್.ಪಿ. ಸುರೇಶ್– ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಶ್ರೀಮತಿ ಗೀತಾ ಕೆ.ಎಸ್. ಕೋಂ ದಿ॥ ಎನ್.ಪಿ.ಸುರೇಶ್ – ಇವರು ಮನವಿ ಸಲ್ಲಿಸಿ, ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ತನ್ನ ಪತಿಯವರಾದ ಶ್ರೀ ಎನ್.ಪಿ ಸುರೇಶ್ ಇವರು ದಿನಾಂಕ: 16–10–2021 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಆದ್ದರಿಂದ ನನ್ನ ಮಗನಾದ ಸುಜನ್ ಎಸ್. ಅಪ್ರಾಪ್ತ ವಯಸ್ಕನಾಗಿರುವುದರಿಂದ (ಜನ್ಮ ದಿನಾಂಕ:13–11–2005) ದಿನಾಂಕ:12–11–2023ಕ್ಕೆ 18 ವರ್ಷ ಪೂರ್ಣಗೊಳ್ಳುತ್ತದೆ. ಆದ್ದರಿಂದ ನನ್ನ ಮಗನಿಗೆ ಅನುಕಂಪ ಆಧಾರಿತ ಉದ್ಯೋಗವನ್ನು ವಿಶ್ವವಿದ್ಯಾಲಯದಲ್ಲಿ ನೀಡುವಂತೆ ಕೋರಿದ್ದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಕುವೆಂಪು ವಿಶ್ವವಿದ್ಯಾಲಯವು ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ ತನ್ನದೇ ಆದ ಪರಿನಿಯಮವನ್ನು ಹೊಂದಿದ್ದು, ಕಂಡಿಕೆ 4.4ರ ಪ್ರಕಾರ 05 ವರ್ಷದ ಒಳಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಮಗ ಅಥವಾ ಮಗಳು ಅರ್ಜಿ ಸಲ್ಲಿಸುವುದಾದಲ್ಲಿ ಆ ಸಂದರ್ಭದಲ್ಲಿ ಅಪ್ರಾಪ್ತರಾಗಿದ್ದರೆ 18 ವರ್ಷಗಳ ತರುವಾಯ 03 ವರ್ಷಗಳವರೆಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಎಂದು ತಿಳಿಸಿ ಹಿಂಬರಹ ನೀಡಲಾಗಿತ್ತು.

ನಂತರ ದಿ.ಎನ್.ಪಿ.ಸುರೇಶ್‌ರವರ ಮಗನಾದ ಮಗನಾದ ಶ್ರೀ ಸುಜನ್ ಎಸ್ ಇವರು ದಿನಾಂಕ:29-08-2024ರಂದು ಮನವಿ ಸಲ್ಲಿಸಿ, ಪ್ರಸ್ತುತ ತನಗೆ 18 ವರ್ಷಗಳು ಪೂರ್ಣಗೊಂಡಿರುವುದರಿಂದ ಅನುಕಂಪದ ಆಧಾರಿತ ಉದ್ಯೋಗವನ್ನು ನೀಡುವಂತೆ ಕೋರಿರುತ್ತಾರೆ ಹಾಗೂ ಸದರಿಯವರ ತಾಯಿಯವರಾದ ಶ್ರೀಮತಿ ಗೀತಾ ಕೆ.ಎಸ್. ಮತ್ತು ಸಹೋದರಿಯಾದ ಸ್ಫೂರ್ತಿ ಎಸ್. ಇವರುಗಳು ಶ್ರೀ ಸುಜನ್ ಎಸ್. ಇವರಿಗೆ ಅನುಕಂಪದ ಆಧಾರದಲ್ಲಿ ನೌಕರಿ ನೀಡಲು ತಮ್ಮ ಆಕ್ಷೇಪಣೆ ಇರುವುದಿಲ್ಲವೆಂದು ಒಪ್ಪಿಗೆ ಪ್ರಮಾಣ ಪತ್ರ ನೀಡಿರುತ್ತಾರೆ.

ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ನೇಮಕಾತಿಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ನೇಮಕಾತಿ) ನಿಯಮ 1996 ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸೇವಾ ಅನುಕಂಪದ ನೇಮಕಾತಿ ಪರಿನಿಯಮ 1991ರ ಪ್ರಕಾರ ಮಾಡಲಾಗುತ್ತಿದೆ.

ಮೇಲ್ಕಂಡ ಹಿನ್ನೆಲೆಯಲಿ ದಿವಂಗತ ಎನ್.ಪಿ.ಸುರೇಶ್‌ರವರ ಮಗನಾದ ಶ್ರೀ ಸುಜನ್ ಎಸ್. ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾಗಿದ್ದು, ಅವರಿಗೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ಉದ್ಯೋಗ ನೀಡುವ ಕುರಿತು ನಿರ್ಣಯಕ್ಕಾಗಿ ಕುಲಸಚಿವರು ಸಭೆಗೆ ವಿಷಯ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ದಾಸ್ತಾನು ಮತ್ತು ಖರೀದಿ ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮೃತ ನೌಕರರಾದ ದಿವಂಗತ ಸುರೇಶ ಎನ್.ಪಿ. ಇವರ ಮಗನಾದ ಶ್ರೀ ಸುಜನ್ ಎಸ್. ಇವರು ದ್ವಿತೀಯ ಪಿ.ಯು.ಸಿ. ಉತ್ತೀರ್ಣರಾಗಿರುವುದರಿಂದ, ಇವರಿಗೆ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ ಅನುಕಂಪದ ಆಧಾರದಲ್ಲಿ ನಿಯಮಾನುಸಾರ ನೇಮಕ ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2024-ಸಿಂ-5.22:** ವೈದ್ಯಕೀಯ ಚಿಕಿತ್ಸಾ ಮುಂಗಡ ಮೊತ್ತ ಪಾವತಿಸಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಜಯಶ್ರೀ, ಪ್ರಥಮ ದರ್ಜೆ ಸಹಾಯಕರು – ಇವರು ಸರ್ಜಿ ಆಸ್ಪತ್ರೆ, ಶಿವಮೊಗ್ಗ ಇಲ್ಲಿ ಎರಡು ಮೊಣಕಾಲುಗಳಿಗೆ ತುರ್ತು ಶಸ್ತ್ರ ಚಿಕಿತ್ಸೆಗೆ ಆಸ್ಪತ್ರೆಯವರು ನೀಡಿದ ಅಂದಾಜು ಪಟ್ಟಿಯ ಮೊತ್ತ ರೂ. 4,50,000/- (ರೂಪಾಯಿ ನಾಲ್ಕು ಲಕ್ಷದ ಐವತ್ತು ಸಾವಿರ ಮಾತ್ರ) ಗಳಲ್ಲಿ ನಿಯಮಾನುಸಾರ ಶೇಕಡ 50 ರಷ್ಟು ಮೊಬಲಗು ರೂ. 2,25,000/- (ರೂಪಾಯಿ ಎರಡು ಲಕ್ಷದ ಇಪ್ಪತ್ತೇದು ಸಾವಿರ ಮಾತ್ರ)ಗಳನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮುಂಗಡವನ್ನು ಪಾವತಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024-ಸಿಂ-5.23:** ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಭಾರ ನಿರ್ದೇಶಕರನ್ನು ನೇಮಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ಆರ್.ಹಿರೇಮಣಿ ನಾಯ್ಕ, ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ – ಇವರು ವೈಯಕ್ತಿಕ ಕಾರಣಗಳಿಂದ ನಿರ್ದೇಶಕರ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ, ಡಾ.ಜಗನ್ನಾಥ ಕೆ. ಡಾಂಗೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ಇವರನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಭಾರ ನಿರ್ದೇಶಕರಾಗಿ ನೇಮಕ ಮಾಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024-ಸಿಂ-5.24:** ಡಾ. ಹೆಚ್.ಎಸ್. ಭೋಜ್ಯಾನಾಯ್ಕ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ

**ನಿರ್ಣಯ:** ಡಾ. ಹೆಚ್.ಎಸ್.ಭೋಜ್ಯಾನಾಯ್ಕ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಇವರನ್ನು ದಿನಾಂಕ:05-09-2024ರ ಸರ್ಕಾರದ ಅಧಿಸೂಚನೆಯನ್ವಯ ಕರ್ನಾಟಕ ಲೋಕ ಸೇವಾ ಆಯೋಗದ (ಕೆ.ಪಿ.ಎಸ್.ಸಿ.) ಸದಸ್ಯರಾಗಿ ನೇಮಕ ಮಾಡಿದ ಹಿನ್ನೆಲೆಯಲ್ಲಿ, ಅವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುವಾಗುವಂತೆ ದಿನಾಂಕ:05-09-2024ರ ಅಪರಾಹ್ನದಿಂದ ಅನ್ವಯವಾಗುವಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

**2024-ಸಿಂ-5.25:** ದಿವಂಗತ ಶ್ರೀಮತಿ ವೇದಾವತಿ ಎಂ.ಎಸ್. ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

**ಚರ್ಚೆ:** ಶ್ರೀ ಶ್ರೀವತ್ಸ ಭಟ್ಟ ಪಿ.ಎಂ. S/o ದಿವಂಗತ ವೇದಾವತಿ ಎಂ.ಎಸ್. – ಇವರು ಮನವಿ ಸಲ್ಲಿಸಿ, ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನನ್ನ ತಾಯಿಯವರಾದ ಶ್ರೀಮತಿ ವೇದಾವತಿ ಎಂ. ಎಸ್. ಇವರು ದಿನಾಂಕ:25-03-2024ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಆದ್ದರಿಂದ ಅವರ ಮಗನಾದ ನನಗೆ ಅನುಕಂಪ ಆಧಾರಿತ ಉದ್ಯೋಗವನ್ನು ನೀಡುವಂತೆ ಪೂರಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿವಂಗತ ವೇದಾವತಿ ಎಂ.ಎಸ್. ಇವರಿಗೆ ಶ್ರೀವತ್ಸ ಭಟ್ಟ ಪಿ.ಎಂ. ಇವರು ಒಬ್ಬರೇ ಮಗನಾಗಿದ್ದು, ವೇದಾವತಿ ಎಂ.ಎಸ್. ಇವರ ಪತಿಯವರು 60 ವರ್ಷ ವಯಸ್ಸನ್ನು ಮೀರಿದ್ದು ಉದ್ಯೋಗಕ್ಕೆ ಅರ್ಹರಿರುವುದಿಲ್ಲ.

ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ನೇಮಕಾತಿಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ನೇಮಕಾತಿ) ನಿಯಮ 1996 ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸೇವಾ ಅನುಕಂಪದ ನೇಮಕಾತಿ ಪರಿನಿಯಮ 1991ರ ಪ್ರಕಾರ ಮಾಡಲಾಗುತ್ತಿದೆ.

ಮೇಲ್ಕಂಡ ಮಾಹಿತಿಗಳೊಂದಿಗೆ ದಿವಂಗತ ವೇದಾವತಿ ಎಂ.ಎಸ್. ರವರ ಏಕೈಕ ಮಗನಾದ ಶ್ರೀ ಶ್ರೀವತ್ಸ ಭಟ್ಟ ಪಿ.ಎಂ. ಇವರು ಬಿ.ವಿ.ಎ. ಪದವಿಯಲ್ಲಿ ಉತ್ತೀರ್ಣರಾಗಿದ್ದು, ಅವರಿಗೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ಉದ್ಯೋಗ ನೀಡುವ ಕುರಿತು ನಿರ್ಣಯಕ್ಕಾಗಿ ಕುಲಸಚಿವರು ಸಭೆಗೆ ವಿಷಯ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಕಿರಿಯ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಮೃತ ನೌಕರರಾದ ದಿವಂಗತ ವೇದಾವತಿ ಎಂ. ಎಸ್. ಇವರ ಮಗನಾದ ಶ್ರೀ ಶ್ರೀವತ್ಸ ಭಟ್ಟ ಪಿ.ಎಂ. ಇವರು ಬಿ.ವಿ.ಎ. ಪದವಿ ಉತ್ತೀರ್ಣರಾಗಿರುವುದರಿಂದ, ಇವರಿಗೆ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ ಅನುಕಂಪದ ಆಧಾರದಲ್ಲಿ ನಿಯಮಾನುಸಾರ ಉದ್ಯೋಗ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2024-ಸಿಂ-5.25(ಎ):** ಪ್ರೊ. ಶರತ್ ಅನಂತಮೂರ್ತಿ, ಮಾನ್ಯ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಇವರಿಗೆ ವಿದೇಶ ಪ್ರಯಾಣಕ್ಕೆ ಅನುಮತಿ ನೀಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರತ್ ಅನಂತಮೂರ್ತಿರವರ ಕುಟುಂಬ ಸದಸ್ಯರು ಕೆನಡಾ ದೇಶದಲ್ಲಿ ವಾಸ್ತವ್ಯ ಹೊಂದಿರುವ ಹಿನ್ನೆಲೆಯಲ್ಲಿ, ವೈಯುಕ್ತಿಕ ಕಾರಣಗಳ ಮೇರೆಗೆ ಕುಟುಂಬದವರನ್ನು ಭೇಟಿ ಮಾಡಲು ದಿನಾಂಕ:16-12-2024 ರಿಂದ 06-01-2025 ರವರೆಗೆ 22 ದಿನಗಳ ಗಳಿಕೆ ರಜೆಯನ್ನು (ದಿನಾಂಕ 14-12-2024 ಮತ್ತು 15-12-2024ರ ಸಾರ್ವತ್ರಿಕ ರಜೆಗಳನ್ನು ಬಳಸಿಕೊಂಡು ಪ್ರಯಾಣದ ದಿನಗಳು ಸೇರಿದಂತೆ 24 ದಿನಗಳು) ಉಪಯೋಗಿಸಿಕೊಂಡು ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸೌಲಭ್ಯವನ್ನು ಪಡೆಯದೆ, ಸ್ವಂತ ಖರ್ಚಿನಲ್ಲಿ ಕೆನಡಾ ದೇಶಕ್ಕೆ ತೆರಳಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**2024–ಸಿಂ–5.26(1): ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

**ಶ್ರೀ ಶಿವಕುಮಾರ್ ಎಂ.**

**2024–ಸಿಂ–5.26(1–ಎ): ಸಿಂಡಿಕೇಟ್ ಸದಸ್ಯರಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸುವ ಪ್ರೋಟೋಕಾಲ್ ನಿಯಮಗಳ ಕುರಿತು.**

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಸಿಂಡಿಕೇಟ್ ಸದಸ್ಯರನ್ನು ಆಹ್ವಾನಿಸುತ್ತಿಲ್ಲ. ಈ ಬಗ್ಗೆ ಪ್ರೋಟೋಕಾಲ್ ನಿಯಮಗಳು ಇಲ್ಲವೇ ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ನಡೆಯವ ವಿವಿಧ ಕಾರ್ಯಕ್ರಮಗಳು, ವಿಚಾರ ಸಂಕಿರಣ ಇತ್ಯಾದಿಗಳ ಆಹ್ವಾನಪತ್ರಿಕೆಗಳನ್ನು ಸಿಂಡಿಕೇಟ್ ಸದಸ್ಯರಿಗೆ ಕಳುಹಿಸಿದಲ್ಲಿ ನಾವೂ ಕೂಡ ಕಾರ್ಯಕ್ರಮಗಳ ಬಗ್ಗೆ ಇತರರಿಗೆ ತಿಳಿಸಲು ಅನುಕೂಲವಾಗುತ್ತದೆ. ಸಿಂಡಿಕೇಟ್ ಸದಸ್ಯರ ವಾಟ್ಸಾಪ್ ಗ್ರೂಪ್ ಇದ್ದು, ಸದರಿ ಗ್ರೂಪ್‌ಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಬಹುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ತಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡ ಸದಸ್ಯರು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಸದಸ್ಯರಾಗಿರುವುದರಿಂದ ಘಟಿಕೋತ್ಸವ ಕಾರ್ಯಕ್ರಮಕ್ಕೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಸದಸ್ಯರನ್ನು ಶಿಷ್ಟಚಾರದ ಅಡಿಯಲ್ಲಿ ಆಹ್ವಾನಿಸಲಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ಜರುಗುವ ವಿಶೇಷವಾದ ರಾಜ್ಯ/ ರಾಷ್ಟ್ರ/ ಅಂತರಾಷ್ಟ್ರೀಯ ಮಟ್ಟದ ಶೈಕ್ಷಣಿಕ, ವಿದ್ಯಾರ್ಥಿಗಳ ಸಾಂಸ್ಕೃತಿಕ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿಭಾಗಗಳಿಂದಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗುತ್ತದೆ. ಇದನ್ನು ಹೊರತುಪಡಿಸಿ ಸಿಂಡಿಕೇಟ್ ಸದಸ್ಯರನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸುವ ಯಾವುದೇ ಪ್ರತ್ಯೇಕವಾದ ಪ್ರೋಟೋಕಾಲ್ ನಿಯಮಗಳನ್ನು ವಿಶ್ವವಿದ್ಯಾಲಯವು ರೂಪಿಸಿಕೊಂಡಿರುವುದಿಲ್ಲ. ಆದಾಗ್ಯೂ, ಸಿಂಡಿಕೇಟ್ ಸದಸ್ಯರು ಕೂಡ ಆಡಳಿತದ ಒಂದು ಭಾಗವಾಗಿರುವುದರಿಂದ ಇನ್ನು ಮುಂದೆ ವಿಶ್ವವಿದ್ಯಾಲಯದಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಪ್ರಾಧಿಕಾರಗಳ ಸದಸ್ಯರಿಗೆ ಕಳುಹಿಸಲು ಆಡಳಿತ ವಿಭಾಗಗಳು, ಅಧ್ಯಯನ ವಿಭಾಗಗಳು ಹಾಗೂ ಘಟಕ ಕಾಲೇಜುಗಳಿಗೆ ಸೂಚನೆ ನೀಡಲಾಗುವುದು. ತುರ್ತು ಸಂದರ್ಭಗಳಲ್ಲಿ ವಾಟ್ಸಾಪ್ ಮುಖಾಂತರ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗುವುದು ಎಂದರು.

**2024–ಸಿಂ–5.26(1–ಬಿ):** ಕುವೆಂಪು ವಿಶ್ವವಿದ್ಯಾಲಯದಲ್ಲಿ ಮ್ಯಾನ್ ಪವರ್ ಏಜೆನ್ಸಿ ಕಾಲಾವಧಿ ಮುಗಿದಿದ್ದರೂ, ಹೊಸ ಟೆಂಡರ್ ಕರೆಯದೇ ಇರುವ ಬಗ್ಗೆ ಹಾಗೂ ಹಳೆಯ ಮ್ಯಾನ್ ಪವರ್ ಏಜೆನ್ಸಿಯನ್ನೇ ಮುಂದುವರೆಸಿರುವ ಬಗ್ಗೆ ಕುರಿತು ಮಾಹಿತಿ ಕೇಳಿದರು.

ಕುಲಸಚಿವರು ಮಾಹಿತಿ ನೀಡುತ್ತಾ, ಈ ಹಿಂದೆ 2023ರಲ್ಲಿ ಇ-ಟೆಂಡರ್ ಕರೆಯಲಾಗಿತ್ತು, ಆದರೆ, ಕುಲಸಚಿವರು ಹಾಗೂ ಕುಲಪತಿಗಳ ಬದಲಾವಣೆಯಿಂದಾಗಿ ಹಾಗೂ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದಾಗಿ ದಿನಾಂಕ:01–07–2023 ರ ಟೆಂಡರ್ ಪ್ರಕಟಣೆಯನ್ನು ದಿನಾಂಕ:31–01–2024 ರಂದು ರದ್ದುಗೊಳಿಸಲಾಗಿದೆ. ನಂತರದಲ್ಲಿ ನೂತನ ಕುಲಪತಿಗಳು ಹಾಗೂ ಕುಲಸಚಿವರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದ್ದರಿಂದ ಟೆಂಡರ್ ಪ್ರಕ್ರಿಯೆಗೆ ತಡೆ ಇತ್ತು. ಕುಲಪತಿಗಳು ಹಾಗೂ ಕುಲಸಚಿವರ DSC Key ಬಹಳ ತಡವಾಗಿ ಸ್ವೀಕೃತವಾಗಿರುತ್ತದೆ. ಅಲ್ಲದೇ, ವಿಶ್ವವಿದ್ಯಾಲಯದಲ್ಲಿ ನಿಗದಿಗಿಂತ ಹೆಚ್ಚಿನ ಹೊರಗುತ್ತಿಗೆ ಸಿಬ್ಬಂದಿ ಇರುವ ಬಗ್ಗೆ ದೂರುಗಳಿವೆ. ಪರಿಶೀಲಿಸಲು ಸಮಿತಿಯನ್ನು ರಚಿಸಲಾಗಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿದೆ. ಅಗತ್ಯವಿರುವ ನೌಕರರ ನಿಖರ ಸಂಖ್ಯೆಯನ್ನು ಪರಿಶೀಲಿಸಿ ಶೀಘ್ರದಲ್ಲಿಯೇ ಟೆಂಡರ್ ಮಾಡಲಾಗುವುದು ಎಂದರು.

**2024–ಸಿಂ–5.26(1–ಸಿ):** ಕುವೆಂಪು ವಿಶ್ವವಿದ್ಯಾಲಯದ ಕುಲಪತಿ/ ರಿಜಿಸ್ಟ್ರರ್/ ಪರೀಕ್ಷಾಂಗ ರಿಜಿಸ್ಟ್ರರ್ ಇವರ ಮೇಲೆ ಲೋಕಾಯುಕ್ತ ಪ್ರಕರಣ ಸಂಖ್ಯೆ ಯುಎಲ್‌ಓಕೆ/ಬಿಡಿ5094/2024 ಇದರ ದೂರಿನ ಮಾಹಿತಿ ಕುರಿತು.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ವ್ಯವಹಾರದ ಅಧಿನಿಯಮ 2018ರ ಪ್ರಕರಣ–I(25) ರನ್ವಯ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯನ್ವಯ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಸುಳ್ಳು ಮಾಹಿತಿಗಳೊಂದಿಗೆ ದೂರು ನೀಡಿರುವುದಾಗಿ ತಿಳಿದು ಬಂದಿದೆ ಎಂದರು. ಕುಲಸಚಿವರು ಮಾತನಾಡಿ, ಇದರ ಕುರಿತು ಪರಿಶೀಲಿಸಲಾಗುವುದು. ಸುಳ್ಳೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ದೂರು ದಾಖಲಿಸಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

2024–ಸಿಂ–5.26(1–ಡಿ): ಕುವೆಂಪು ವಿಶ್ವವಿದ್ಯಾಲಯದ ಅನುದಾನಕ್ಕೊಳಪಟ್ಟ ಎಲ್ಲಾ ಕಲಿಕಾ ಕೇಂದ್ರದಿಂದ ಬರಬೇಕಾದ ಬಾಕಿ ಮೊತ್ತ ಹಾಗೂ ವಿಧಿಸಿರುವ ದಂಡದ ಕುರಿತು.

ಇದರ ಕುರಿತಾಗಿ ಲಿಖಿತ ಮಾಹಿತಿ ಹಾಗೂ ವಿವರಗಳನ್ನು ಸದಸ್ಯರಿಗೆ ಒದಗಿಸಲಾಯಿತು.

2024–ಸಿಂ–5.26(2): **ಶ್ರೀ ಲಕ್ಷ್ಮಿಕಾಂತ್ ಚಿಮನೂರು**

2024–ಸಿಂ–5.26(2–ಎ): ಎಲ್.ಎಂ.ಎಸ್ ಸಾಫ್ಟ್‌ವೇರ್ ಖರೀದಿಯ ಬಗ್ಗೆ ಪೂರ್ಣ ಮಾಹಿತಿ ಒದಗಿಸುವ ಬಗ್ಗೆ.

ಈ ಬಗ್ಗೆ ವಿಷಯ ಸಂಖ್ಯೆ: 2024–ಸಿಂ–5.01ರಲ್ಲಿ ಚರ್ಚಿಸಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು ಹಾಗೂ ಲಿಖಿತ ಮಾಹಿತಿಯನ್ನು ಕೂಡ ಒದಗಿಸಲಾಯಿತು.

2024–ಸಿಂ–5.26(2–ಬಿ): ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಜಮೀನು/ನಿವೇಶನ ಮತ್ತು ಒತ್ತುವರಿಯಾದ ಬಗ್ಗೆ ಮಾಹಿತಿ.

ಶ್ರೀ ಲಕ್ಷ್ಮಿಕಾಂತ್ ಚಿಮನೂರುರವರು ಮಾತನಾಡಿ, ಸಹ್ಯಾದ್ರಿ ಕಾಲೇಜಿನ ಜಾಗವು ದೇವಸ್ಥಾನ, ಖಬರಸ್ಥಾನ, ಖಾಸಗಿ ಬಡಾವಣೆಗಳು ಒತ್ತುವರಿ ಮಾಡಿದ್ದು, ಕೋಟ್ಯಾಂತರ ಬೆಲೆ ಬಾಳುವ ಜಾಗದ ಒತ್ತುವರಿಯನ್ನು ತೆರವುಗೊಳಿಸಬೇಕು. ಮುಂದಿನ ದಿನಗಳಲ್ಲಿ ಕಾಲೇಜಿನ ಅಭಿವೃದ್ಧಿಗೆ ಜಾಗದ ಅವಶ್ಯಕತೆ ಇದ್ದು, ಅಗತ್ಯಕ್ಕೆ ಅನುಗುಣವಾಗಿ ಭೂಮಿಯನ್ನು ಖರೀದಿಸಲು ಆಗುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ, ಈ ಹಿಂದೆ, ಎನ್.ಸಿ.ಸಿ. ನಿರ್ದೇಶನಾಲಯ, ದೂರದರ್ಶನ ಕೇಂದ್ರ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಛೇರಿ, ದೇವರಾಜ ಅರಸು ಭವನ ಮತ್ತು ಅದರ ಪಕ್ಕದಲ್ಲಿ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಾಗಿ ಸಹ್ಯಾದ್ರಿ ಕಾಲೇಜಿನ ಜಾಗವನ್ನು ಬಿಟ್ಟುಕೊಡಲಾಗಿದೆ. ಅಲ್ಲದೇ, ಕೆಲವು ಅಲೆಮಾರಿಗಳು ಕಾಲೇಜಿನ ಜಾಗದಲ್ಲಿ ಟೆಂಟ್ ಹಾಕಿಕೊಂಡು ವಾಸವಾಗಿದ್ದಾರೆ. ದೇವಸ್ಥಾನ ಮತ್ತು ಖಬರಸ್ಥಾನದವರಿಂದಲೂ ಒತ್ತುವರಿಯಾಗಿದೆ. ಖಾಸಗಿ ಬಡಾವಣೆಯವರು ರಸ್ತೆ ನಿರ್ಮಿಸಿಕೊಂಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹೊಸದಾಗಿ ಸರ್ಕಾರದ ವತಿಯಿಂದ ಸರ್ವೆಮಾಡಿಸಿ ಒತ್ತುವರಿಯಾಗಿರುವ ಕಾಲೇಜಿನ ಜಾಗವನ್ನು ಬಿಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದರು. ಇದನ್ನು ಆದಷ್ಟು ಬೇಗನೆ ಮಾಡುವುದರ ಮೂಲಕ ಒತ್ತುವರಿಯಾಗಿರುವ ಸಹ್ಯಾದ್ರಿ ಕಾಲೇಜಿನ ಜಾಗವನ್ನು ಮರಳಿಪಡೆಯುವಂತೆ ಎಲ್ಲಾ ಸದಸ್ಯರು ವಿನಂತಿಸಿದರು.

2024–ಸಿಂ–5.26(2–ಸಿ): ನೌಕರರ ಮಧ್ಯೆ ಮಾಡಿರುವ ತಾರತಮ್ಯತೆ ಸರಿಪಡಿಸುವ ಮೂಲಕ ಎಲ್ಲಾ ನೌಕರರಿಗೂ ಸಮಾನತೆ ಮತ್ತು ಸಾರ್ವತ್ರಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಈ ಹಿಂದೆ ಇದೇ ವಿಶ್ವವಿದ್ಯಾಲಯ 12 ಮತ್ತು 11 ಮತ್ತು ಹಾಗೂ 45 ವಿಲೀನಿಕರಣ ನೌಕರರಿಗೆ ನೀಡಿರುವ ಎಲ್ಲಾ ಸೇವಾ ಸೌಲಭ್ಯಗಳನ್ನು ಉಳಿದ ವಿಲೀನಿಕರಣ ನೌಕರರಿಗೂ ಯಥಾ ರೀತಿ ವಿಸ್ತರಿಸಲು ಸಿಂಡಿಕೇಟ್ (16–10–2020) ನಿರ್ಣಯವಾಗಿದ್ದರೂ ಈವರೆಗೂ ಮಂಜೂರಾತಿ ಆದೇಶ ನೀಡದೇ ಇರುವ ಬಗ್ಗೆ ಮಾಹಿತಿ ಕೋರಿದರು.

ವಿಶ್ವವಿದ್ಯಾಲಯದಲ್ಲಿ 1989 ರಿಂದ 2006ರವರೆಗೆ ಸಂಚಿತ ವೇತನದ ಆಧಾರದ ಮೇಲೆ ನೇಮಕಗೊಂಡಿದ್ದು, ನಂತರ ಸೇವಾ ಸಕ್ರಮಗೊಂಡು ಕಾರ್ಯ ನಿರ್ವಹಿಸುತ್ತಿರುವ ನೌಕರರು ಸಂಚಿತ ವೇತನ ಆಧಾರದ ಅಡಿಯಲ್ಲಿ ಸಲ್ಲಿಸಿದ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಸಂರಕ್ಷಿಸಿ, ಪರಿಗಣಿಸುವ ಸಂಬಂಧ ರಚಿಸಲಾಗಿದ್ದ ಸಮಿತಿಯು ದಿನಾಂಕ:20–07–2023ರಂದು ಸಲ್ಲಿಸಿದ ವರದಿಯನ್ನು ದಿನಾಂಕ:28–02–2024ರಂದು ನಡೆದ ಸಿಂಡಿಕೇಟ್ ಸಭೆಯು ಅಂಗೀಕರಿದೆ. ಈ ವರದಿಯನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ನೇಮಕಗೊಂಡು ವಿಲೀನಿಕರಣಗೊಂಡ ಎಲ್ಲಾ ನೌಕರರಿಗೆ (ದಾವಣಗೆರೆ ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮುಂತಾದ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಸೇರಿದಂತೆ) ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿತ್ತು. ವಿಲೀನೀಕರಣಗೊಂಡ ನೌಕರರಿಗೆ ಸೇವಾ ಜೇಷ್ಠತೆ, ಆರ್ಥಿಕ ಸೌಲಭ್ಯ, ಮುಂಬಡ್ತಿ ಮುಂತಾದ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ನಿರ್ಣಯ ತೆಗೆದುಕೊಂಡಿರುವ ದಿನಾಂಕ: 16–10–2020 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ ವಿಷಯ ಸಂಖ್ಯೆ:2020–ಸಿಂ–06.04(ಇ)ನ್ನು ಹಿಂಪಡೆಯಲು ದಿನಾಂಕ:28–02–2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸರ್ವಾನುಮತದೊಂದಿಗೆ ನಿರ್ಣಯಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ.

2024–ಸಿಂ–5.26(2–ಡಿ): ಹಲವು ವರ್ಷಗಳಿಂದ ಆಯಾ ಕಟ್ಟಿನ ಜಾಗಗಳಲ್ಲಿ ಇರುವ ನೌಕರರನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ವರ್ಗಾವಣೆ ಮಾಡದೇ ಇರುವ ಬಗ್ಗೆ ಮಾತನಾಡುತ್ತಾ, ಕನಿಷ್ಠ 05 ವರ್ಷಗಳಿಗೆ ಒಮ್ಮೆಯಾದರೂ ನೌಕರರ ಕಾರ್ಯಸ್ಥಾನವನ್ನು ಬದಲಾಯಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಆಯಕಟ್ಟಿನ ಜಾಗ ಎಂಬುದು ಯಾವುದೂ ಇಲ್ಲ. ಸಕ್ಷಮ ಪ್ರಾಧಿಕಾರದ ಸಭೆಗಳಲ್ಲಿ ಈ ರೀತಿಯ ಪದಗಳನ್ನು ಮಾನ್ಯ ಸದಸ್ಯರುಗಳು ಬಳಸಬಾರದು. ವಿಭಾಗಗಳ ಮುಖ್ಯಸ್ಥರ ಕೋರಿಕೆ, ನೌಕರರ ಮನವಿ, ಕಾರ್ಯಕ್ಷಮತೆ, ದೂರುಗಳು ಹಾಗೂ ಅಗತ್ಯತೆಗೆ ಅನುಗುಣವಾಗಿ ಆಂತರಿಕ ಬದಲಾವಣೆ ಮಾಡಲಾಗುತ್ತದೆ. ಕೆಲವು ಅನಿವಾರ್ಯ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ನೌಕರರನ್ನು ಆಂತರಿಕ ಬದಲಾವಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

2024–ಸಿಂ–5.26(3): **ಪ್ರೊ. ಸಾಕಮ್ಮ ಬಿ.**

2024–ಸಿಂ–5.26(3–ಎ): ಯು.ಜಿ. ಕಾಲೇಜುಗಳಲ್ಲಿ ಎಸ್.ಇ.ಪಿ.ಗೆ ನೀಡಿರುವ ಬೋಧನಾ ಅವಧಿ 05 ಗಂಟೆಗಳಿಗೆ ಬದಲಾಗಿ 06 ಗಂಟೆಗಳ ಅವಧಿಯನ್ನು ನೀಡುವುದರ ಬಗ್ಗೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಆದೇಶ ಸಂಖ್ಯೆ ಇಡಿ 166 ಯುಎನ್ಇ 2023, ಬೆಂಗಳೂರು ದಿನಾಂಕ:08–05–2024 ಅನ್ವಯ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೇಸ್ 1 ಅಳವಡಿಸಿಕೊಳ್ಳಲಾಗಿದೆ. ಸದರಿ ಮಾರ್ಗಸೂಚಿಯಂತೆ 2024–25ನೇ ಸಾಲಿನಲ್ಲಿ ಸ್ನಾತಕ ಪದವಿಗಳ ಎಸ್.ಇ.ಪಿ. ಕೋರ್ಸ್‌ಗಳಿಗೆ ಅಳವಡಿಸಿಕೊಂಡಿರುವ ಕಾರ್ಯಭಾರ 05 ಗಂಟೆಗಳಾಗಿದ್ದು, ಇದರನ್ವಯ ಅನುಮೋದನೆಗೊಂಡ ಪಠ್ಯಕ್ರಮ ಮತ್ತು ರೂಪುರೇಷೆಗಳನ್ನು ಶೈಕ್ಷಣಿಕ ವಿಭಾಗದಿಂದ ಕಾಲೇಜುಗಳಿಗೆ ಪರಿಚಲಿಸಲಾಗಿರುತ್ತದೆ. ಕಾರ್ಯಭಾರದ ಬದಲಾವಣೆ ಬಗ್ಗೆ ಅಧ್ಯಯನ ಮಂಡಳಿ, ನಿಕಾಯ ಮತ್ತು ವಿದ್ಯಾವಿಷಯಕ ಪರಿಷತ್ತಿನಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2024–ಸಿಂ–5.26(3–ಬಿ): ಕುವೆಂಪು ವಿಶ್ವವಿದ್ಯಾಲಯದಲ್ಲಿ ಎ.ಇ. ಹುದ್ದೆಯಿಂದ ಎ.ಇ.ಇ. ಹುದ್ದೆಗೆ ಬಡ್ತಿ ನೀಡಿರುವ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ದಾಖಲೆಗಳನ್ನು ಸಭೆಗೆ ಮಂಡಿಸುವುದು.

ಶ್ರೀಮತಿ ಸಾಕಮ್ಮರವರು ಮಾತನಾಡಿ, ಶ್ರೀ ಕಾಳರಾಜರವರಿಗೆ ಎ.ಇ. ಹುದ್ದೆಯಿಂದ ಎ.ಇ.ಇ. ಹುದ್ದೆಗೆ ಬಡ್ತಿ ನೀಡಲಾಗಿದೆ. ಆದರೆ, ಸಿಂಗಲ್ ಹುದ್ದೆ ಇದ್ದಲ್ಲಿ ಬಡ್ತಿ ನೀಡಲು ಅವಕಾಶವಿಲ್ಲ. ಅದನ್ನು ನೇರ ನೇಮಕಾತಿ ಅಥವಾ ನಿಯೋಜನೆ ಮೂಲಕ ಭರ್ತಿ ಮಾಡಬೇಕಾಗುತ್ತದೆ. ಅಲ್ಲದೇ ಇಂಜಿನಿಯರಿಂಗ್ ವಿಭಾಗದಲ್ಲಿರುವ ಬೇರೆ ಹಿರಿಯ ನೌಕರರನ್ನು ಸದರಿ ಹುದ್ದೆಯ ಬಡ್ತಿಗೆ ಪರಿಗಣಿಸಿಲ್ಲ. ಆದುದರಿಂದ ಶ್ರೀ ಕಾಳರಾಜರವರಿಗೆ ನೀಡಿರುವ ಬಡ್ತಿಯನ್ನು ಹಿಂಪಡೆಯಬೇಕು ಎಂದರು.

ಕುಲಸಚಿವರು ಮಾತನಾಡಿ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡುವ ಬಗ್ಗೆ ಪರಿನಿಯಮ ರಚಿಸಿಕೊಂಡಿದ್ದು, ಸದರಿ ಪರಿನಿಯಮವು ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ ಹಿನ್ನಲೆಯಲ್ಲಿ, ಸದರಿ ಪರಿನಿಯಮದನ್ವಯ ವಿದ್ಯಾರ್ಹತೆ, ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಸಲ್ಲಿಸಿರುವ ಸೇವೆ, ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವುದು, ಅವರ ವಾರ್ಷಿಕ ಕಾರ್ಯನಿರ್ವಹಣಾ ವರದಿ ಮುಂತಾದ ಅಂಶಗಳನ್ನು ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಸಭೆಯ ನಿರ್ಣಯದಂತೆ ಸಹಾಯಕ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಗಿದೆ. ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಶ್ರೀ ಕಾಳರಾಜ ಅವರೊಬ್ಬರೇ ಸಹಾಯಕ ಇಂಜಿನಿಯರ್ ಆಗಿದ್ದು, ಪ್ರಸ್ತುತ ಬೇರೆ ಯಾರೂ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ ಎಂದರು.

2024–ಸಿಂ–5.26(3–ಸಿ): ಶ್ರೀ ಎಂ.ಎಂ. ಸ್ವಾಮಿ ಕಿರಿಯ ಸಹಾಯಕ ಹಾಗೂ ಉಪಾಧ್ಯಕ್ಷ ವಿಲೀನೀಕರಣ ನೌಕರರ ವೇದಿಕೆ ಇವರು ದಿನಾಂಕ:04–10–2024 ರ ಅವರ ಮನವಿ ಪತ್ರದಲ್ಲಿ ಪ್ರಸ್ತಾಪಿಸಿರುವ ಅಧ್ಯಾಪಕೇತರ ನೌಕರರಿಗೆ ಸಂಬಂಧಿಸಿದ 06 ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಸಂಪೂರ್ಣ ಮಾಹಿತಿ ದಾಖಲೆಗಳನ್ನು ಸಭೆಗೆ ಮಂಡಿಸುವುದು.

ಸದರಿಯವರ ಪತ್ರದ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಸದಸ್ಯರಿಗೆ ಮಾಹಿತಿ ನೀಡಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

2024–ಸಿಂ–5.26(3–ಡಿ): ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಸಹಾಯಕ ಕುಲಸಚಿವರಾದ ಶ್ರೀ ಬಸವಣ್ಣ ಎಸ್. ಇವರ ನಿವೃತ್ತಿ ವೇತನ ಆದೇಶ ಪರಿಷ್ಕರಣೆ ಬಗ್ಗೆ ಕ್ರಮಕೈಗೊಳ್ಳುವುದು.

ಶ್ರೀ ಬಸವಣ್ಣ ಎಸ್. ರವರು ಮೂಲತ: ಮೈಸೂರು ವಿಶ್ವವಿದ್ಯಾಲಯದ ನೌಕರರಾಗಿದ್ದರು. ಕುವೆಂಪು ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ವರ್ಗಾವಣೆಗೊಂಡು ಇಲ್ಲಿಯೇ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಸಹಾಯಕ ಕುಲಸಚಿವ ಹುದ್ದೆಯಲ್ಲಿ ನಿವೃತ್ತಿಯಾಗಿದ್ದಾರೆ. ಅವರಿಗೆ ನಿವೃತ್ತಿ ವೇತನದ ಪರಿಷ್ಕರಣೆ ಬಗ್ಗೆ ಹಲವಾರು ಬಾರಿ ಹಿಂಬರಹಗಳನ್ನು ನೀಡಲಾಗಿದ್ದು, ಪ್ರಸ್ತುತ ಸದರಿಯವರು ಮತ್ತೆ ಮತ್ತೆ ಮನವಿಗಳನ್ನು ಸಲ್ಲಿಸುತ್ತಿದ್ದ ಹಿನ್ನಲೆಯಲ್ಲಿ ಕಾನೂನು ಸಲಹೆಗಾರರಿಗೆ ಪತ್ರಿಸಲಾಗಿತ್ತು. ಕಾನೂನು ಅಭಿಪ್ರಾಯದನುಸಾರ ಸದರಿಯವರಿಗೆ ಇತ್ತೀಚೆಗೆ ಮತ್ತೊಮ್ಮೆ ಹಿಂಬರಹ ನೀಡಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2024–ಸಿಂ–5.26(4): **ಶ್ರೀ ಹೆಚ್.ಜಿ. ಅರವಿಂದ**

ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕಮಗಳೂರು ಇಲ್ಲಿಗೆ ಎಲ್ಲಾ ಮೂಲಭೂತ ಸೌಕರ್ಯ ನೀಡುವುದರ ಜೊತೆಗೆ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಸ್ನಾತಕೋತ್ತರ ಕೇಂದ್ರವನ್ನು ಪೂರ್ಣ ಪ್ರಮಾಣದಲ್ಲಿ ಸ್ಥಾಪಿಸುವ ಕುರಿತು ಚರ್ಚೆ ಮತ್ತು ನಿರ್ಣಯಕ್ಕಾಗಿ.

ಚಿಕ್ಕಮಗಳೂರು ಭಾಗದ ಜನಪ್ರತಿನಿಧಿಗಳು, ವಿದ್ಯಾರ್ಥಿಗಳು ಹಾಗೂ ಪೋಷಕರ ಮನವಿಯ ಮೇರೆಗೆ ಸ್ನಾತಕೋತ್ತರ ಕೇಂದ್ರವನ್ನು ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನ ಆವರಣದ ಕಟ್ಟಡದಲ್ಲಿ ಆರಂಭಿಸಲಾಗಿದೆ. ಸದರಿ ಕೇಂದ್ರದಲ್ಲಿ ಆರಂಭಿಸಿರುವ ಅಧ್ಯಯನ ವಿಭಾಗಗಳಿಗೆ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ವಿನಿಯಮ ಆಕ್ಷೇಪಣೆಗಳೊಂದಿಗೆ ಹಿಂದಿರುಗಿ ಬಂದಿದೆ. ಸ್ನಾತಕೋತ್ತರ ಕೇಂದ್ರಕ್ಕಾಗಿ ಕದ್ರಿಮಿದ್ರಿ ಗ್ರಾಮದ ಸರ್ವೆ ನಂ.273 ರಲ್ಲಿ 40 ಎಕರೆ ಜಾಗವನ್ನು ಸರ್ಕಾರವು ಮಂಜೂರು ಮಾಡಿದೆ. ಸದರಿ ಭೂಪ್ರದೇಶಕ್ಕೆ ತಂತಿ ಬೇಲಿಯನ್ನು ನಿರ್ಮಿಸಲಾಗಿದೆ. ಅಲ್ಲಿ ಆಡಳಿತ ಕಛೇರಿ, ಶೈಕ್ಷಣಿಕ ಕಟ್ಟಡಗಳು, ಹಾಸ್ಟೆಲ್ ಮುಂತಾದ ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕಾಗಿ ನೀಲನಕ್ಷೆ ಸಿದ್ಧಪಡಿಸಲಾಗಿದ್ದು, ವಿಶೇಷ ಅಭಿವೃದ್ಧಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದ್ದು, ಅನುದಾನ ಮಂಜೂರಾಗಿಲ್ಲ. ಅನುದಾನದ ಕೊರತೆಯಿಂದ ಕಟ್ಟಡಗಳ ನಿರ್ಮಾಣ ಆಗಿಲ್ಲ. ಸರ್ಕಾರವು ಅನುದಾನ ಮಂಜೂರು ಮಾಡಿದಲ್ಲಿ ಅಗತ್ಯ ಮೂಲಭೂತ ಸೌಲಭ್ಯವನ್ನು ನಿರ್ಮಿಸಿ ಐ.ಡಿ.ಎಸ್.ಜಿ. ಕಾಲೇಜಿನ ಆವರಣದಲ್ಲಿರುವ ಸ್ನಾತಕೋತ್ತರ ಕೇಂದ್ರವನ್ನು ನೂತನ ಕ್ಯಾಂಪಸ್‌ಗೆ ಸ್ಥಳಾಂತರಿಸಲಾಗುವುದು ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

2024–ಸಿಂ–5.26(5): **ಡಾ. ಅನಂತ ಎಸ್**

2024–ಸಿಂ–5.26(5–ಎ): ಪ್ರೊ. ಮಂಜುನಾಥ್ ಕೆ.ಆರ್. ಮುಖ್ಯಸ್ಥರು ಎಂ.ಬಿ.ಎ. ವಿಭಾಗ, ಇವರು ಪರೀಕ್ಷಾಂಗ ವಿಭಾಗದಲ್ಲಿ ಪಡೆದಿರುವ ಸಂಭಾವನೆ ಹಾಗೂ ಲೋಕಲ್ ಕನ್ವೇಯನ್ಸ್ ಕುರಿತು.

ಪ್ರೊ. ಮಂಜುನಾಥ್ ಕೆ.ಆರ್. ಮುಖ್ಯಸ್ಥರು ಎಂ.ಬಿ.ಎ. ವಿಭಾಗ, ಇವರು ಪರೀಕ್ಷಾಂಗ ವಿಭಾಗದಲ್ಲಿ ಉಪಕುಲಸಚಿವರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಪಡೆದಿರುವ ಸಂಭಾವನೆ ಹಾಗೂ ಲೋಕಲ್ ಕನ್ವೆಯನ್ಸ್‌ಗಳ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು ಹಾಗೂ ಇದೇ ಮಾಹಿತಿಯನ್ನು ದಿನಾಂಕ:19–07–2024ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಕೂಡ ಒದಗಿಸಿರುವುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

2024–ಸಿಂ–5.26(5–ಬಿ): ಕುವೆಂಪು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಾಗಿರುವ ಸಹ್ಯಾದ್ರಿ ವಿಜ್ಞಾನ, ಕಲಾ ಹಾಗೂ ವಾಣಿಜ್ಯಶಾಸ್ತ್ರ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳು ಹಾಗೂ ಹಾಸ್ಟೆಲ್ ಕೇರ್ ಟೇಕರ್ (ವಾರ್ಡನ್) ನಿಯೋಜಿಸಿರುವ ಕುರಿತು.

ಡಾ.ಎಸ್.ಅನಂತ್ ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನಲ್ಲಿ ಐದು ವರ್ಷಗಳಿಂದ ಡಾ.ಶುಭ ಮರವಂತೆ, ಕನ್ನಡ ವಿಭಾಗದ ಸಹಪ್ರಾಧ್ಯಾಪಕರು–ಇವರು ಹಾಸ್ಟೆಲ್‌ನ ವಾರ್ಡನ್ ಆಗಿ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿಯಾಗಿ ಕೂಡ ಇತ್ತೀಚೆಗೆ ಪ್ರಭಾರ ವಹಿಸಿಕೊಂಡಿದ್ದಾರೆ.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಪ್ರೊ. ಲತಾ, ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರು, ಇವರು ಕಳೆದ ಆರು ವರ್ಷಗಳಿಂದ ಹಾಸ್ಟೆಲ್ ಕೇರ್ ಟೇಕರ್ (ವಾರ್ಡನ್) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗದ ಸಂಚಾಲಕರಾಗಿರುವ ಡಾ. ಕೆ. ಚಂದ್ರಪ್ಪರವರು ಕಳೆದ 13 ವರ್ಷಗಳಿಂದ ಹಾಸ್ಟೆಲ್ ಕೇರ್ ಟೇಕರ್ (ವಾರ್ಡನ್) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಹೆಚ್ಚುವರಿ ಹುದ್ದೆಯಲ್ಲಿ ಅಧ್ಯಾಪಕರು ಮೂರು ವರ್ಷ ಮಾತ್ರ ಕಾರ್ಯನಿರ್ವಹಿಸಬೇಕೆಂದು ವಿಶ್ವವಿದ್ಯಾಲಯದ ನಿಯಾಮಾವಳಿಯಲ್ಲಿ ಉಲ್ಲೇಖಿಸಲಾಗಿದೆ. ಆದುದರಿಂದ, ಪ್ರಜಾಸತ್ತಾತ್ಮಕವಾಗಿ ಮತ್ತು ನ್ಯಾಯಯುತವಾಗಿ ಸೇವಾ ಜೇಷ್ಠತೆಯನ್ನು ಗಮನದಲ್ಲಿರಿಸಿಕೊಂಡು ಈ ಹುದ್ದೆಗಳನ್ನು ರೊಟೇಷನ್ ಪದ್ಧತಿಯ ಮೇಲೆ ಒಬ್ಬರಿಗೆ ಒಂದು ಜವಾಬ್ದಾರಿಯನ್ನು ನೀಡಿ ನಿಯೋಜಿಸುವ ಕುರಿತು ಮಾಹಿತಿ ನೀಡಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, ಸದರಿ ವಿಷಯದ ಕುರಿತಾಗಿ ದಿನಾಂಕ:16-11-2024ರಂದು ಘಟಕ ಕಾಲೇಜುಗಳ ಪ್ರಾಂಶುಪಾಲರ ಸಭೆ ನಡೆಸಿದ್ದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್ ವಾರ್ಡನ್‌ಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ, ಅಧ್ಯಾಪಕರುಗಳು ವಾರ್ಡನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತಿ ತೋರಿಸುತ್ತಿಲ್ಲವಾದ್ದರಿಂದ ಅವರುಗಳನ್ನು ಮುಂದುವರೆಸಲಾಗುತ್ತಿದೆ ಎಂಬ ಅಭಿಪ್ರಾಯ ನೀಡಿದ್ದಾರೆ ಎಂದರು.

**2024-ಸಿಂ-5.26(5-ಸಿ): ಸರ್ಕಾರದಿಂದ ವಿವಿಧ ವೃಂದವಾರು ಮಂಜೂರಾದ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕೇತರ ನೌಕರರ ಜೇಷ್ಠತಾ ಪಟ್ಟಿಗೆ ಅನುಗುಣವಾಗಿ ಬಡ್ತಿ ನೀಡುವ ಕುರಿತು.**

ಡಾ.ಅನಂತ್ ಎಸ್. ರವರು ಮಾತನಾಡುತ್ತಾ, ಬೋಧಕೇತರ ನೌಕರರಿಗೆ ಈ ಹಿಂದೆ ನೀಡಿರುವ ಬಡ್ತಿಗಳನ್ನು 10 ವರ್ಷಗಳ ನಂತರ ಹಿಂಪಡೆದಿರುವುದು ಸರಿಯಷ್ಟೆ, ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಬಡ್ತಿ, ನಿವೃತ್ತಿ ಮರಣಗಳಿಂದ ತೆರವಾದ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅರ್ಹತಾ ದಿನಾಂಕಗಳಿಗೆ ನಿಯಮಾನುಸಾರ ನೀಡಬೇಕಿತ್ತು. ಆದರೆ ಏಕಾಏಕಿಯಾಗಿ ಹಿಂಬಡ್ತಿ ಮಾಡಿದ್ದು, ಬಡ್ತಿಗೆ ಅವಕಾಶವಿರುವ ಹಲವಾರು ನೌಕರರಿಗೆ ಅನ್ಯಾಯವಾಗಿರುತ್ತದೆ. ಹಿಂಬಡ್ತಿಯನ್ನು ನೀಡಬೇಕಾದರೆ ತಾವು ಕಾರ್ಯನಿರ್ವಹಿಸುತ್ತಿರುವ ಹುದ್ದೆಯಿಂದ ಸಮೀಪದ ಹಿಂದಿನ ಹುದ್ದೆಗೆ ಹಿಂಬಡ್ತಿಯನ್ನು ನೀಡಬೇಕಾಗಿತ್ತು. ಆದರೆ ಎರಡೂ ಅಥವಾ ಅದಕ್ಕಿಂತ ಹೆಚ್ಚಿನ ಕೆಳಹಂತದ ಹುದ್ದೆಗಳಿಗೆ ಹಿಂಬಡ್ತಿ ನೀಡಿರುವುದು ನಿಯಮಬಾಹಿರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಬಡ್ತಿ ಹಾಗೂ ವೇತನ ನಿಗದೀಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಕೈಗೊಂಡಿರುವ ಕ್ರಮಗಳ ಮಾಹಿತಿ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ದಿನಾಂಕ:28-10-2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕೇತರ ನೌಕರರುಗಳಿಗೆ ಅರ್ಹತಾ ದಿನಾಂಕದಿಂದ ಬಡ್ತಿ ನೀಡುವ ಬಗ್ಗೆ ಚರ್ಚಿಸಿದ್ದು, ಕೆಲವು ತಾಂತ್ರಿಕ ಸಮಸ್ಯೆಗಳಿವೆ. ಒಮ್ಮೆ ನೌಕರರಿಗೆ ಬಡ್ತಿ ನೀಡಿದಲ್ಲಿ ಅದನ್ನು ಪರಿಷ್ಕರಿಸುವ ಅಥವಾ ಹಿಂಪಡೆಯುವ ಸಂದರ್ಭ ಬರಬಾರದು. ಈ ಹಿನ್ನೆಲೆಯಲ್ಲಿ ಕಾನೂನು ಸಲಹೆ ಪಡೆಯುವ ಬಗ್ಗೆ ನಿರ್ಣಯಿಸಿದ್ದು, ಕಾನೂನು ಸಲಹೆ ಕೋರಿ ಪತ್ರಿಸಲಾಗಿದೆ. ಕಾನೂನು ಸಲಹೆ ಪಡೆದ ನಂತರ ಮುಂಬಡ್ತಿ ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದು ಎಂದರು.

**2024-ಸಿಂ-5.27: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2024-ಸಿಂ-5.27(1): ಶ್ರೀ ಶಿವಕುಮಾರ್ ಎಂ.**

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರನ್ನು ವಿಶ್ವವಿದ್ಯಾಲಯದ ಯಾವುದೇ ಸಮಿತಿಗೆ ಸದಸ್ಯರಾಗಿ ನೇಮಕ ಮಾಡುತ್ತಿಲ್ಲ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ ಎಲ್ಲಾ ಸದಸ್ಯರನ್ನು ವಿಶ್ವವಿದ್ಯಾಲಯದ ವಿವಿಧ ಸಮಿತಿಗಳಿಗೆ / ಉಪಸಮಿತಿಗಳಿಗೆ ಸದಸ್ಯರಾಗಿ ನೇಮಕ ಮಾಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಎಲ್ಲಾ ಶಾಸನಬದ್ಧ ಸಮಿತಿಗಳಿಗೆ ಮತ್ತು ಕೆಲವು ಸಲಹಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲಾಗುತ್ತಿದೆ. ಆದಾಗ್ಯೂ, ಅಗತ್ಯವಿರುವ ವಿವಿಧ ಸಮಿತಿ/ಉಪಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

2024-ಶಿಂ-5.27(2): **ಶ್ರೀ ಮುಸಾವೀರ್ ಬಾಷಾ:**

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಕೆಲವು ವಿಭಾಗಗಳಲ್ಲಿ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಇಂಗ್ಲೀಷ್‌ನಲ್ಲಿ ಮಾತ್ರ ನೀಡಲಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಿದೆ. ಆದುದರಿಂದ ಕನ್ನಡದಲ್ಲಿ ಕೂಡ ಒದಗಿಸಿದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಎಲ್ಲಾ ವಿಷಯಗಳಿಗೂ ಅನ್ವಯವಾಗುವಂತೆ ಒಂದೇ ಕೇಂದ್ರೀಕೃತ ಪ್ರಶ್ನೆಪತ್ರಿಕೆಯನ್ನು ಪರೀಕ್ಷಾ ವಿಭಾಗದಿಂದಲೇ ಒದಗಿಸಬೇಕು ಹಾಗೂ ಪರೀಕ್ಷಾ ವಿಭಾಗವೇ ಪರೀಕ್ಷೆ ನಡೆಸಬೇಕು. ಪಿಹೆಚ್.ಡಿ. ಆಯ್ಕೆಗೆ ಏರ್ಪಡಿಸುತ್ತಿರುವ ಸಂದರ್ಶನ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಆದುದರಿಂದ ಸಂದರ್ಶನವನ್ನು ರದ್ದುಪಡಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಪಿಹೆಚ್.ಡಿ. ಸಂಶೋಧನೆ ಕೈಗೊಳ್ಳುವ ಅಭ್ಯರ್ಥಿಯ ಶೈಕ್ಷಣಿಕ ಹಾಗೂ ಸಂಶೋಧನಾ ಜ್ಞಾನದ ಬಗ್ಗೆ ಪರಿಶೀಲಿಸಲು ಸಂದರ್ಶನ ನಡೆಸುವ ಅಗತ್ಯವಿದೆ. ಪಿಹೆಚ್.ಡಿ. ಪ್ರವೇಶಕ್ಕೆ ಕೇಂದ್ರೀಯ ಪರೀಕ್ಷಾ ವ್ಯವಸ್ಥೆ ಮಾಡಬಹುದು ಎಂದರು.

ಶ್ರೀ ಲಕ್ಮಿಕಾಂತ ಚಿಮನೂರ್‌ರವರು ಮಾತನಾಡಿ ಇತಿಹಾಸ ವಿಭಾಗದಲ್ಲಿ ಮಾರ್ಗದರ್ಶಕರ ಬಳಿ ರಿಕ್ತ ಸ್ಥಾನವಿದ್ದು, ಅಭ್ಯರ್ಥಿಯು ಪಿಹೆಚ್.ಡಿ. ಆಯ್ಕೆಪಟ್ಟಿಯಲ್ಲಿದ್ದರೂ ಕೂಡ ಮುಂದಿನ ವರ್ಷದಲ್ಲಿ ಸಂಶೋಧನೆ ಕೈಗೊಳ್ಳುವಂತೆ ತಿಳಿಸುತ್ತಿದ್ದಾರೆ. ಇದರಿಂದ ಅಭ್ಯರ್ಥಿಗಳಿಗೆ ವಿನಾಕಾರಣ ವಿಳಂಬವಾಗುತ್ತದೆ ಎಂದರು. ಪ್ರೊ.ಎಸ್.ವಿ.ಕೃಷ್ಣಮೂರ್ತಿರವರು ಮಾತನಾಡಿ, ಪಿಹೆಚ್.ಡಿ. ಗೆ ಸಂಶೋಧನಾರ್ಥಿಗಳನ್ನು ವಿಭಾಗದ ಮಟ್ಟದಲ್ಲಿಯೇ ನಿಯಮಾನುಸಾರ ಆಯ್ಕೆ ಮಾಡಬೇಕಾಗುತ್ತದೆ. ಮಾರ್ಗದರ್ಶಕರಿಗೆ ಸಂಶೋಧನಾರ್ಥಿಗಳನ್ನು ಹಂಚಿಕೆ ಮಾಡುವಾಗ ಅಧ್ಯಾಪಕರ specilization ಹಾಗೂ ವಿದ್ಯಾರ್ಥಿಯ ಆಸಕ್ತಿಯ ಕ್ಷೇತ್ರ ಮತ್ತು ವಿಷಯಗಳು ಹೊಂದಾಣಿಕೆ ಆಗಬೇಕು. ಈ ಉದ್ದೇಶದಿಂದಲೇ ಆಯ್ಕೆಗಾಗಿ ಸಂದರ್ಶನ ನಡೆಸಲಾಗುತ್ತದೆ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ರಾಜ್ಯ ಸರ್ಕಾರವು ಪಿಹೆಚ್.ಡಿ. ಸಂಶೋಧನಾರ್ಥಿಗಳ ಆಯ್ಕೆಗಾಗಿ ರಾಜ್ಯಮಟ್ಟದಲ್ಲಿ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಲು ಸಿದ್ಧತೆ ನಡೆಸುತ್ತದೆ. ಅದು ಜಾರಿಯಾದರೆ ಎಲ್ಲಾ ಗೊಂದಲಗಳು ಬಗೆ ಹರಿಯುತ್ತವೆ ಎಂದರು.

2024-ಶಿಂ-5.27(3-ಎ): **ಶ್ರೀ ಲಕ್ಮಿಕಾಂತ ಚಿಮನೂರ್**

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಹಂಗಾಮಿ ನೌಕರರನ್ನು ವಿಲೀನೀಕರಣಗೊಳಿಸಿರುವುದರಲ್ಲಿ ಏಕರೂಪತೆಯನ್ನು ಅನುಸರಿಸಿಲ್ಲ. 6 ತಿಂಗಳುಗಳಿಂದ 10 ವರ್ಷಗಳವರೆಗೆ ವಿವಿಧ ಹಂತಗಳಲ್ಲಿ ವಿಲೀನೀಕರಣಗೊಳಿಸಿದೆ. ಕೆಲವರಿಗೆ ಒಂದೆರಡು ವರ್ಷಕ್ಕೆ ಬಡ್ತಿ ನೀಡಿದರೆ, ಕೆಲವರು 30 ವರ್ಷಗಳಿಂದಲೂ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಬ್ಬ ನೌಕರನಿಗೆ ತನ್ನ ಸೇವಾ ಅವಧಿಯಲ್ಲಿ ಕನಿಷ್ಠ 3 ಬಡ್ತಿಗಳನ್ನಾದರೂ ನೀಡಬೇಕು. ಆದರೆ, ವಿಶ್ವವಿದ್ಯಾಲಯದಲ್ಲಿ ಕೆಲವು ನೌಕರರು ಯಾವುದೇ ಬಡ್ತಿ ಇಲ್ಲದೇ ನೇಮಕಾತಿಗೊಂಡ ಹುದ್ದೆಯಲ್ಲಿಯೇ ನಿವೃತ್ತರಾಗಿದ್ದಾರೆ ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ ನೌಕರರಿಗೆ ದೊರೆಯಬೇಕಾದ ಬಡ್ತಿ ಮುಂತಾದ ಸೌಲಭ್ಯಗಳು ಸಕಾಲದಲ್ಲಿ ಸಿಗದಿದ್ದರೆ ಅವರು ಕೆಲಸದ ಮೇಲಿನ ಆಸಕ್ತಿ ಕಳೆದುಕೊಳ್ಳುತ್ತಾರೆ ಎಂದರು.

ಕುಲಸಚಿವರು ಮಾತನಾಡಿ, 1990 ರಿಂದ 2006ರವರೆಗೆ ಸುಮಾರು 178 ಹಂಗಾಮಿ ನೌಕರರನ್ನು ವಿವಿಧ ದಿನಾಂಕಗಳಂದು ವಿಶ್ವವಿದ್ಯಾಲಯದ ಖಾಯಂ ಸೇವೆಯಲ್ಲಿ ವಿಲೀನೀಕರಣಗೊಳಿಸಿದೆ. ಆದರೆ, ವಿಲೀನೀಕರಣ ಮಾಡಿರುವುದನ್ನು ಹಿಂಪಡೆಯುಂತೆ ಈಗಲೂ ಸರ್ಕಾರದಿಂದ ಪತ್ರಗಳು ಬರುತ್ತಿವೆ. ವಿಲೀನೀಕರಣಗೊಂಡ ನೌಕರರಿಗೆ ಸೇವಾ ಭದ್ರತೆ ಮಾಡಿಕೊಂಡಿಲ್ಲ. ಉಮಾದೇವಿ ಪ್ರಕರಣಲ್ಲಿ We also clarify that regularization, if any already made, but not subjudice, need not be reopened based on this judgment, but there should be no further by-passing of the constitutional requirement and regularizing or making permanent, those not duly appointed as per the constitutional scheme ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಇದರ ಪ್ರಕಾರ ದಿನಾಂಕ:10-04-2006ಕ್ಕಿಂತ ಮುಂಚಿನ ವಿಲೀನೀಕರಣ ಪ್ರಕರಣಗಳನ್ನು ಮತ್ತೆ reopen



ಕುಲಸಚಿವರು,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಮಾಡುವಂತಿಲ್ಲ. ಆದಾಗ್ಯೂ, ಸರ್ಕಾರದಿಂದ ಪತ್ರಗಳು ಬರುತ್ತಿರುವುದರಿಂದ ಇದರ ಕುರಿತಾಗಿ ಸರ್ಕಾರಕ್ಕೆ ಮತ್ತೊಮ್ಮೆ ಪತ್ರ ಬರೆಯಲಾಗುವುದು ಎಂದರು.

ಅಧ್ಯಾಪಕೇತನ ನೌಕರರ ಬಡ್ತಿ ವಿಷಯದ ಕುರಿತು ಮಾತನಾಡಿದ ಕುಲಸಚಿವರು, ಸರ್ಕಾರದಿಂದ ಮಂಜೂರಾಗಿರುವ ಉಪಕುಲಸಚಿವ ಹುದ್ದೆಗಳು ಖಾಲಿ ಇವೆ. ಅರ್ಹ ಅಭ್ಯರ್ಥಿಗಳು ಕೂಡ ಇದ್ದಾರೆ. ಆದರೆ, ನಮ್ಮಲ್ಲಿ ಕುವೆಂಪು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ವಿನಿಯಮ ಇಲ್ಲ. ಮೈಸೂರು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ವಿನಿಯಮವನ್ನೇ ಈಗಲೂ ಪಾಲಿಸಲಾಗುತ್ತಿದೆ. ಅದರ ಪ್ರಕಾರ ಉಪಕುಲಸಚಿವ ಹುದ್ದೆಯಲ್ಲಿ ಶೇ.75ರಷ್ಟು ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಬೇಕಾಗಿದ್ದು, ಉಳಿದ ಶೇ.25ರಷ್ಟು ಹುದ್ದೆಗಳಿಗೆ deputation ಮಾಡಿಕೊಳ್ಳಲು ಅವಕಾಶವಿದೆ. ನಮ್ಮಲ್ಲಿ ಬಹಳ ವರ್ಷಗಳಿಂದ ಉಪಕುಲಸಚಿವ ಹುದ್ದೆಯ ಬಡ್ತಿಗಾಗಿ ಸಂದರ್ಶನ ನಡೆಸಿಲ್ಲ. ಈಗ ಸಹಾಯಕ ಕುಲಸಚಿವ ವೃಂದದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಂದಿರುವ ಅರ್ಜಿಗಳ ಪರಿಶೀಲನೆಗಾಗಿ ಸಮಿತಿ ರಚಿಸಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ಆಯ್ಕೆ ಸಮಿತಿ ರಚಿಸಿ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು.

ಹಿರಿಯ ಸಹಾಯಕ ವೃಂದಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳು 12 ಮಾತ್ರ, ಆದರೆ ಹೆಚ್ಚುವರಿಯಾಗಿ 36 ಹುದ್ದೆಗಳನ್ನು ಉನ್ನತೀಕರಣ ಮಾಡಿಕೊಂಡು ಒಟ್ಟು 48 ನೌಕರರಿಗೆ ಬಡ್ತಿ ನೀಡಲಾಗಿತ್ತು. ಹುದ್ದೆಗಳ ಉನ್ನತೀಕರಣದ ವಿನಿಯಮ ಸರ್ಕಾರದಿಂದ ಅನುಮೋದನೆಯಾಗದ ಹಿನ್ನೆಲೆಯಲ್ಲಿ ಆಡಿಟ್‌ನಿಂದ ಕೂಡ ಆಕ್ಷೇಪಣೆಯಾಗಿತ್ತು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು ಕೂಡ ವೇತನದ ಬಿಲ್ಲನ್ನು ಪಾವತಿಸದೇ ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಹಿಂದಿನ ಆಡಳಿತದವರು, ಮಂಜೂರಾಗಿ ಲಭ್ಯವಿರುವ 12 ಹಿರಿಯ ಸಹಾಯಕ ಹುದ್ದೆಗಳನ್ನು ಹೊರತುಪಡಿಸಿ ಹುದ್ದೆಗಳ ಉನ್ನತೀಕರಣದ ಮೂಲಕ ನೀಡಲಾಗಿದ್ದ 36 ಹುದ್ದೆಗಳಿಗೆ ನೀಡಲಾಗಿದ್ದ ಬಡ್ತಿಗಳನ್ನು ಮಾತ್ರ ಹಿಂಪಡೆಯಬೇಕಾಗಿತ್ತು. ಆದರೆ, ಎಲ್ಲಾ ಬಡ್ತಿಗಳನ್ನು ಹಿಂಪಡೆದಿದ್ದಾರೆ. ಕಳೆದ ಆಗಸ್ಟ್ ಮಾಹೆಯಲ್ಲಿ ಇಲಾಖಾ ಮುಂಬಡ್ತಿ ಸಮಿತಿಯ ಮುಖಾಂತರ ಲಭ್ಯ ಹುದ್ದೆಗಳಿಗೆ 12 ಜನ ಪ್ರಥಮ ದರ್ಜೆ ಸಹಾಯಕರಿಗೆ ಹಿರಿಯ ಸಹಾಯಕ ಹುದ್ದೆಗೆ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಬಡ್ತಿ ನೀಡಲಾಗಿದೆ. ಅವರುಗಳು ಇನ್ನೊಂದು ಬಡ್ತಿ ಶಾಖಾಧಿಕಾರಿ ಹುದ್ದೆಗೆ ಅರ್ಹರಿದ್ದಾರೆ. ಈ ಹಿನ್ನೆಲೆಯಲ್ಲಿ, ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಡ್ತಿ ನೀಡಿದ ನಂತರದ ಸ್ಥಾನಪನ್ನ ಅವಧಿ 1 ವರ್ಷ ಇರುವುದನ್ನು ಕಳೆದ ಸಿಂಡಿಕೇಟ್ ಸಭೆಯಲ್ಲಿ 6 ತಿಂಗಳಿಗೆ ಇಳಿಸಲಾಗಿದೆ. ಸ್ಥಾನಪನ್ನ ಅವಧಿ ಮುಗಿದ ನಂತರವೇ ಬಡ್ತಿ ನೀಡಬೇಕಾಗುತ್ತದೆ. ಪ್ರಸ್ತುತ ಬಡ್ತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ಕೂಡ ಹುದ್ದೆಗಳನ್ನು ಉನ್ನತೀಕರಣ ಮಾಡಿಕೊಂಡು ನೀಡಿದ್ದ ಬಡ್ತಿಗಳನ್ನು ಹಿಂಪಡೆಯಲಾಗಿದೆ. ವಿಶ್ವವಿದ್ಯಾಲಯ ಅನುಸರಿಸುತ್ತಿರುವ ವಿನಿಯಮದ ಪ್ರಕಾರ ಮಂಜೂರಾಗಿ ಲಭ್ಯವಿರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಲ್ಲಿ ಶೇ.50 ರಷ್ಟನ್ನು ನೇರ ನೇಮಕಾತಿ ಮೂಲಕ ಮತ್ತು ಉಳಿದ ಶೇ.50ನ್ನು ಬಡ್ತಿ ಮೂಲಕ ತುಂಬಲು ಅವಕಾಶವಿದೆ. ಬಡ್ತಿಗೆ ಲಭ್ಯವಿರುವ ಹುದ್ದೆಗಳನ್ನು ಈಗಾಗಲೇ ಅರ್ಹರಿರುವವರಿಗೆ ನೀಡಲಾಗಿದೆ. ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳಿಂದ ನೇರ ನೇಮಕಾತಿ ಆಗಿಲ್ಲ. ಅಲ್ಲದೇ, ಬಡ್ತಿಗೆ ಹೆಚ್ಚಿನ ಹುದ್ದೆಗಳು ಇಲ್ಲದಿರುವುದರಿಂದ ಬಹಳಷ್ಟು ನೌಕರರು ಬಡ್ತಿಯಿಂದ ವಂಚಿತರಾಗಿದ್ದಾರೆ. ಸರ್ಕಾರದ ಕೆಲವು ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ನೇಮಕಾತಿ ಆಗದೇ ಖಾಲಿ ಉಳಿದಿರುವ ಹುದ್ದೆಗಳನ್ನು ಫ್ರೀಜ್ ಮಾಡಿ ಬಡ್ತಿ ನೀಡಿದ್ದಾರೆ. ಅದೇ ರೀತಿ ವಿಶ್ವವಿದ್ಯಾಲಯದಲ್ಲಿ ಕೂಡ ನೇರ ನೇಮಕಾತಿಗೆ ಮೀಸಲಿರುವ ಹುದ್ದೆಗಳನ್ನು ಫ್ರೀಜ್ ಮಾಡಿ ಅರ್ಹ ನೌಕರರಿಗೆ ಬಡ್ತಿ ನೀಡಲು ಅನುಮತಿ ನೀಡುವಂತೆ ಕೋರಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಅನುಮತಿ ಬಂದ ನಂತರ ಇನ್ನಷ್ಟು ಅರ್ಹ ನೌಕರರಿಗೆ ಬಡ್ತಿ ನೀಡಲಾಗುವುದು ಎಂದರು.

024–ಸಿಂ–5.27(3–ಬಿ) ಸದಸ್ಯರಾದ ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಡಾ. ಪ್ರಶಾಂತ್ ಎಸ್.ಜೆ. ಪ್ರಾಧ್ಯಾಪಕರು, ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ಇವರು ಕುವೆಂಪು ವಿಶ್ವವಿದ್ಯಾಲಯದ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಕೋರಿ ಮನವಿ ಮಾಡಿದ್ದು, ಅನುಮತಿ ನೀಡುವಂತೆ ಕೋರಿದರು.

ಕುಲಸಚಿವರು ಮಾಹಿತಿ ನೀಡಿ ಮಾತನಾಡುತ್ತಾ, ಡಾ. ಪ್ರಶಾಂತ್ ಎಸ್.ಜೆ. ರವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೊಳ್ಳಲು ಇಚ್ಛಿಸಿ ಸರ್ಕಾರಕ್ಕೆ ಸಲ್ಲಿಸಿರುವ ಮನವಿಯ ಮೇರೆಗೆ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಆಹಾರ ಸಂಸ್ಕರಣೆ ಮತ್ತು ಪೋಷಣೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ವಿಭಾಗದಲ್ಲಿ ಪ್ರಾಧ್ಯಾಪಕರ ಹುದ್ದೆ ಖಾಲಿ ಇರುವ ಬಗ್ಗೆ ಹಾಗೂ ಡಾ. ಪ್ರಶಾಂತ್ ಎಸ್.ಜೆ. ಪ್ರಾಧ್ಯಾಪಕರು ಇವರನ್ನು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಿಕೊಳ್ಳಲು ವಿಶ್ವವಿದ್ಯಾಲಯಗಳ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಸರ್ಕಾರವು ತಿಳಿಸಿದೆ. ಆದರೆ, ನಮ್ಮ ವಿಶ್ವವಿದ್ಯಾಲಯದ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಸರ್ಕಾರದಿಂದ ಯಾವುದೇ ಹುದ್ದೆಗಳು ಮಂಜೂರಾಗಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ವರದಿ ನೀಡುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಶ್ರೀ ಹೆಚ್.ಜಿ.ಅರವಿಂದ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಖಾಯಂ ಅಧ್ಯಾಪಕರ ಸಂಖ್ಯೆ ಕಡಿಮೆ ಇರುವುದರಿಂದ ಹಾಗೂ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಯಾವುದೇ ಖಾಯಂ ಅಧ್ಯಾಪಕರು ಇಲ್ಲದಿರುವುದರಿಂದ ಡಾ. ಪ್ರಶಾಂತ್ ಎಸ್.ಜೆ. ಪ್ರಾಧ್ಯಾಪಕರು ಇವರಿಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಅನುಮತಿಸಿದಲ್ಲಿ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ಬರುವುದರಿಂದ ಶೈಕ್ಷಣಿಕ ಹಾಗೂ ಸಂಶೋಧನಾ ಚಟುವಟಿಕೆಗಳಿಗೆ ಅನುಕೂಲವಾಗುವುದರಿಂದ ಅನುಮತಿ ನೀಡಬಹುದು ಎಂದರು.

ಚರ್ಚೆಯ ನಂತರ, ಡಾ. ಪ್ರಶಾಂತ್ ಎಸ್.ಜೆ. ಪ್ರಾಧ್ಯಾಪಕರು, ಆಹಾರ ಸಂಸ್ಕರಣೆ ಮತ್ತು ಪೋಷಣೆ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ಇವರು ಕುವೆಂಪು ವಿಶ್ವವಿದ್ಯಾಲಯದ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗಕ್ಕೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಹೊಂದಲು ಅನುಮತಿಸಿದ ಸಭೆಯು ಅವರಿಗೆ ನಿರಪೇಕ್ಷಣಾ ಪತ್ರ ನೀಡಲು ನಿರ್ಣಯಿಸಿತು.

2024–ಸಿಂ–5.27(4–ಎ): **ಡಾ. ಅನಂತ್ ಎಸ್.**

ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಮುಗಿದಿದ್ದು, ತರಗತಿಗಳು ಆರಂಭವಾಗಿವೆ. ಆದರೆ, ನಮ್ಮಲ್ಲಿ ದಿನಾಂಕ:15–11–2024ಕ್ಕೆ ಪ್ರವೇಶ ಮುಕ್ತಾಯಗೊಂಡಿದ್ದು, ವಿಶ್ವವಿದ್ಯಾಲಯದ ಕೆಲವು ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸೀಟುಗಳು ಖಾಲಿ ಇವೆ. ಅಲ್ಲದೇ, ಸ್ನಾತಕ ಪದವಿಯ ರಿಪೀಟರ್ ಫಲಿತಾಂಶ ಇನ್ನೂ ಪ್ರಕಟವಾಗುತ್ತಲೇ ಇದೆ. ಆದುದರಿಂದ, ಖಾಲಿ ಇರುವ ಸೀಟುಗಳಿಗೆ ಪ್ರವೇಶಾವಕಾಶ ಕಲ್ಪಿಸುವುದರಿಂದ ಮಾಹಿತಿ ಕೊರತೆಯಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದ ಹಾಗೂ ಇದೀಗ ಫಲಿತಾಂಶ ಪ್ರಕಟವಾಗುತ್ತಿರುವ ರಿಪೀಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸುವುದರ ಜೊತೆಗೆ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳನ್ನು ಕೂಡ ಭರ್ತಿ ಮಾಡುವುದರಿಂದ ಪ್ರವೇಶ ಸಂಖ್ಯೆ ಕೂಡ ಹೆಚ್ಚಾಗುತ್ತದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ ಬೇಡಿಕೆ ಇರುವ ವಿಭಾಗಗಳಲ್ಲಿ ಸೀಟು ಹೆಚ್ಚಿಸಿ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಿ ಎಂದರು. ಕುಲಸಚಿವರು ಉತ್ತರಿಸುತ್ತಾ, ಈಗಿನ ಎಲ್ಲಾ ಪ್ರವೇಶಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕವೇ ಆಗುತ್ತಿದ್ದು, ಅದರಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಒಂದು ಪ್ರವೇಶವನ್ನು ಕೂಡ ನೀಡಲು ಅವಕಾಶವಿಲ್ಲ ಎಂದರು.

ಚರ್ಚೆಯ ನಂತರ, ಮಾಹಿತಿ ಕೊರತೆಯಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದ ಹಾಗೂ ಇದೀಗ ಫಲಿತಾಂಶ ಪ್ರಕಟವಾಗುತ್ತಿರುವ ರಿಪೀಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸುವುದರ ಜೊತೆಗೆ ಸ್ನಾತಕೋತ್ತರ ವಿಭಾಗಗಳು ಹಾಗೂ ಸಂಯೋಜಿತ ಕಾಲೇಜುಗಳ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಖಾಲಿ ಇರುವ ಸೀಟುಗಳನ್ನು ಕೂಡ ಭರ್ತಿ ಮಾಡಲು 15 ದಿನಗಳ ಕಾಲಾವಕಾಶ ನೀಡಲು ಅನುಮತಿಸಿದ ಸಭೆಯು, ಈ ಬಗ್ಗೆ ವಿಶ್ವವಿದ್ಯಾಲಯದಿಂದ ಸುತ್ತೋಲೆ ಹೊರಡಿಸಲು ಹಾಗೂ ಪತ್ರಿಕಾ ಮಾಧ್ಯಮದ ಮೂಲಕ ಪ್ರಚಾರ ನೀಡಬೇಕೆಂದು ನಿರ್ಣಯಿಸಲಾಯಿತು.

2024–ಸಿಂ–5.27(4–ಬಿ): ಡಾ.ಅನಂತ್ ಎಸ್. ರವರು ಮಾತನಾಡಿ, ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಇತಿಹಾಸ ವಿಭಾಗದ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ಶ್ರೀ ಮಹೇಶ್ವರಪ್ಪರವರು ಎನ್.ಪಿ.ಎಸ್. ನೌಕರರಾಗಿದ್ದು, 2013ರಿಂದಲೇ ಅವರ ವೇತನದಲ್ಲಿ ಎನ್.ಪಿ.ಎಸ್. ವಂತಿಕೆಯನ್ನು ಕಟಾಯಿಸಲಾಗುತ್ತಿತ್ತು. ಆದರೆ, 2017ರಲ್ಲಿ ಪ್ರಾನ್ ಖಾತೆ ತೆರೆದು 2018ರಲ್ಲಿ ಕಟಾಯಿಸಲಾದ ಹಣವನ್ನು ಜಮೆ ಮಾಡಿದ್ದರಿಂದಾಗಿ, ಇವರೊಂದಿಗೆ ಸರ್ಕಾರಿ ಕಾಲೇಜುಗಳಲ್ಲಿ ನೇಮಕವಾದ ಅಧ್ಯಾಪಕರಿಗೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಹೋಲಿಸಿದಲ್ಲಿ, ಶ್ರೀ ಮಹೇಶ್ವರಪ್ಪರವರಿಗೆ ಸುಮಾರು ರೂ.7.00 ಲಕ್ಷ (ರೂಪಾಯಿ ಏಳು ಲಕ್ಷ ಮಾತ್ರ)ಗಳಷ್ಟು ನಷ್ಟವಾಗಿದೆ. ಇದನ್ನು ವಿಶ್ವವಿದ್ಯಾಲಯದಿಂದ ನೀಡಿದರೆ ಅವರಿಗೆ ಅನುಕೂಲವಾಗುತ್ತದೆ ಎಂದರು.

ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದಾಗಿ ಕುಲಸಚಿವರು ತಿಳಿಸಿದರು.

2024–ಶಿಂ–5.27(4): **ಶ್ರೀ ಬಿ.ಎನ್. ಶಶಿಧರ**

ಈ ಹಿಂದೆ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರವೇಶ ಪಡೆದ 980 ವಿದ್ಯಾರ್ಥಿಗಳಿಗೆ ಈವರೆಗೂ ಪರೀಕ್ಷೆ ನಡೆಸಿಲ್ಲ. 02 ವಾರಗಳಲ್ಲಿ ಪರೀಕ್ಷೆ ನಡೆಸುವಂತೆ ನ್ಯಾಲಯಾಲಯದ ಆದೇಶವಾಗಿ ಒಂದು ವರ್ಷವಾದರೂ ಪರೀಕ್ಷೆ ನಡೆಸಿಲ್ಲ. ಪರೀಕ್ಷೆ ನಡೆಸಲು ಅವಕಾಶವಿದ್ದರೆ, ಸೂಕ್ತ ಕ್ರಮ ಕೈಗೊಂಡು ನಿಯಮಾನುಸಾರ ಪರೀಕ್ಷೆ ನಡೆಸಿ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಪರೀಕ್ಷೆ ಬರೆಯದ ಉಳಿದ ವಿದ್ಯಾರ್ಥಿಗಳಿದ್ದರೆ, ಅವರಿಗೂ ಪರೀಕ್ಷೆ ನಡೆಸಿ ಎಂದರು.

ಚರ್ಚೆಯ ನಂತರ ಪ್ರವೇಶ ಶುಲ್ಕ ಪಾವತಿಸಿ ನಿಯಮಾನುಸಾರ ಪ್ರವೇಶ ಅನುಮೋದನೆಯಾಗಿರುವವರಿಗೆ ಹಾಗೂ ಪ್ರಥಮ ವರ್ಷದಲ್ಲಿ ಉತ್ತೀರ್ಣರಾಗಿರುವವರಿಗೆ ನಿಯಮಗಳನ್ವಯ ಪರಿಶೀಲಿಸಿ, ದ್ವಿತೀಯ ವರ್ಷಕ್ಕೆ ಪ್ರವೇಶ ನೀಡಿ ಪರೀಕ್ಷೆ ನಡೆಸಬೇಕೆಂದು ನಿರ್ಣಯಿಸಲಾಯಿತು.

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

2024–ಶಿಂ–5.28 **ಯಾವುದೂ ಇಲ್ಲ**

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/–
**ಕುಲಪತಿಗಳು**